ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ,
ಬೆಂಗಳೂರು – 560 001

ಸಂಖ್ಯೆ: ಯೋ 6 ಜಿ ಉ ನಿ ಸಭೆ 01/2012-13 ದಿ: 24.11.2012

ಟಿಪ್ಪಣಿ

ವಿಷಯ: ದಿ: 20.10.2012ರಂದು ನಡೆದ ಜಿಲ್ಲಾ ಉಪನಿರ್ದೇಶಕರ[ಆಡಳಿತ] ಸಭೆಯ ನಡವಳಿಯನ್ನು ಮಾಹಿತಿಗಾಗಿ ಜಿಲ್ಲೆಗಳಿಗೆ ಕಳುಹಿಸುತ್ತಿರುವ ಬಗ್ಗೆ

ವಿಷಯಕ್ಕೆ ಸಂಬಂಧಿಸಿದಂತೆ ದಿ: 20.10.2012ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರ[ಆಡಳಿತ] ಸಭೆಯ ನಡವಳಿಯನ್ನು ಮಾಹಿತಿಗಾಗಿ ಸಂಬಂಧಿಸಿದ ಎಲ್ಲರಿಗೆ ಇದರೊಂದಿಗೆ ಲಗತ್ತಿಸಿದೆ. ಲಗತ್ತಿನಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಾಲಯದ ವಿಷಯ ಸೂಚಿಗಳಿಗೆ ಸಂಬಂಧಪಟ್ಟಂತೆ ಎಸ್ ಎಸ್ ಎ – ಎಸ್ ಪಿ ಡಿರವರ ಸಹಿ ಇರುವ ನಡವಳಿ ಪ್ರತಿಯನ್ನು ಅಡಕಗೊಳಿಸಿದೆ .

ಸಹ ನಿರ್ದೇಶಕರು [ಶಾಲಾ ಶಿಕ್ಷಣ]

ಗೆ

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ಮಾಧ್ಯಮಿಕ ಶಿಕ್ಷಣ ಅಭಿಯಾನ [ಆರ್‌ಎಂಎಸ್‌ಎ] ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗಾ ಇವರ ಸೂಕ್ತ ಕ್ರಮಕ್ಕಾಗಿ
3. ಅಪರ ಆಯುಕ್ತರು[ಆಡಳಿತ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ
4. ನಿರ್ದೇಶಕರು, ಎಸ್‌ಎಸ್‌ಎ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
5. ನಿರ್ದೇಶಕರು, ಆರ್‌ಎಂಎಸ್‌ಎ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
6. ನಿರ್ದೇಶಕರು, ಡಿಎಸ್‌ಇಆರ್‌ಟಿ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
7. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು[ಪ್ರಾಥಮಿಕ/ಪ್ರೌಢಶಿಕ್ಷಣ]
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
9. ವಿಭಾಗೀಯ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗಾ ರವರು ತ್ವರಿತವಾಗಿ ಮಾಹಿತಿಯನ್ನು ಕಳುಹಿಸಲು ಕ್ರಮ ಕೈಗೊಳ್ಳುವುದು.
10. ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹನಿರ್ದೇಶಕರು[ಶಾಲಾ ಶಿಕ್ಷಣ]/ಮಧ್ಯಾಹ್ನ ಉಪಹಾರ ಯೋಜನೆ
11. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
12. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು[ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸೂಕ್ತ ಕ್ರಮಕ್ಕಾಗಿ, ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸುವ ಕ್ರಮವನ್ನು ಸೂಚಿಸಿ.
13. ಉಪನಿರ್ದೇಶಕರು[ಪ್ರಾಥಮಿಕ/ಪ್ರೌಢ/ಅಂಕಿ ಅಂಶ/ಶಿಕ್ಷಕರ ಕ್ಷೇಮಾಭಿವೃದ್ಧಿ ನಿಧಿ/ದೈಹಿಕ ಶಿಕ್ಷಣ]
14. ಮುಖ್ಯ ಲೆಕ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
15. ನೋಡಲ್ ಅಧಿಕಾರಿಗಳು, ಇ-ಆಡಳಿತ ಘಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

ಪ್ರತಿ

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಕಛೇರಿ ಪ್ರತಿ.

\\10.96.135.22\typing3server\D\Planning\3698.docx

ದಿನಾಂಕ 20.10.2012ರಂದು ಮಾನ್ಯ ಸಾ ಶಿ ಇ ಆಯುಕ್ತರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಕೆಂಪೇಗೌಡ ರಸ್ತೆ ಶಿಕ್ಷಕರ ಸದನ ಸಭಾಂಗಣದಲ್ಲಿ ನಡೆದ ರಾಜ್ಯದ ಎಲ್ಲಾ ಉಪನಿರ್ದೇಶಕರುಗಳ ಸಭೆಯ ನಡವಳಿಗಳು.

******

<u>ಹಾಜರಿದ್ದ ಅಧಿಕಾರಿಗಳು:-</u>

1) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
2) ಮಾನ್ಯ ಯೋಜನಾ ನಿರ್ದೇಶಕರು , ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಶಿಕ್ಷಣ ಅಭಿಯಾನ , ಬೆಂಗಳೂರು
3) ಅಪರ ಆಯುಕ್ತರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4) ಅಪರ ಆಯುಕ್ತರು, ಧಾರವಾಡ.
5) ಅಪರ ಆಯುಕ್ತರು, ಗುಲಬರ್ಗಾ.
6) ನಿರ್ದೇಶಕರು, (ಪ್ರೌಢ ಶಿಕ್ಷಣ).
7) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
8) ನಿರ್ದೇಶಕರು, (ಎಸ್.ಎಸ್.ಎ.)
9) ನಿರ್ದೇಶಕರು, (ಆರ್.ಎಂ.ಎಸ್.ಎ)
10) ನಿರ್ದೇಶಕರು , ಕೆ ಎಸ್ ಇ ಇ ಬಿ , ಮಲ್ಲೇಶ್ವರಂ , ಬೆಂಗಳೂರು
11) ನಿರ್ದೇಶಕರು ( ಇತರೆ ಪರೀಕ್ಷೆಗಳು) , ಕೆ ಎಸ್ ಇ ಇ ಬಿ , ಮಲ್ಲೇಶ್ವರಂ , ಬೆಂಗಳೂರು
12) ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು.
13) ವ್ಯವಸ್ಥಾಪಕ ನಿರ್ದೇಶಕರು , ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) , ಬೆಂಗಳೂರು
14) ಸಹನಿರ್ದೇಶಕರು, (ಎಸ್.ಎಸ್.ಎ.)
15) ಸಹ ನಿರ್ದೇಶಕರು , ಕೆ ಎಸ್ ಇ ಇ ಬಿ , ಮಲ್ಲೇಶ್ವರಂ , ಬೆಂಗಳೂರು
16) ಸಹ ನಿರ್ದೇಶಕರು , ಬೆಂಗಳೂರು ವಿಭಾಗ
17) ಸಹ ನಿರ್ದೇಶಕರು , ಮೈಸೂರು ವಿಭಾಗ
18) ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು,
19) ಆಯುಕ್ತರ ಕಾರ್ಯಾಲಯದ ಪ್ರಾಥಮಿಕ ಶಿಕ್ಷಣದ ಉಪನಿರ್ದೇಶಕರು
20) ಆಯುಕ್ತರ ಕಾರ್ಯಾಲಯದ ಪ್ರೌಢ ಶಿಕ್ಷಣದ ಉಪನಿರ್ದೇಶಕರು

21) ಕಛೇರಿಯ ಅಧಿಕಾರಿಗಳು, ಹಾಗೂ ಸಿಬ್ಬಂದಿ ವರ್ಗದವರು.

22) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮಹಾ ಪ್ರಬಂಧಕರು ( ತಾಂತ್ರಿಕ ) , ಬೆಂಗಳೂರು

ಪ್ರಾರಂಭದಲ್ಲಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ ವರ್ಗದವರನ್ನು ಉಪನಿರ್ದೇಶಕರು (ಯೋಜನೆ) ಆಯುಕ್ತರ ಕಛೇರಿ, ಬೆಂಗಳೂರು ರವರು ಸ್ವಾಗತಿಸುತ್ತಾ ಸಭೆಯ ಅಧ್ಯಕ್ಷತೆ ವಹಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸುವಂತೆ ಮಾನ್ಯ ಆಯುಕ್ತರವರನ್ನು ಕೋರಿದರು.

ಮಾನ್ಯ ಆಯುಕ್ತರು , ಸಭಾ ವಿಷಯ ಸೂಚಿ ಕುರಿತಂತೆ ಪ್ರಗತಿ ಪರಿಶೀಲನೆಯನ್ನು ಕೈಗೊಂಡರು .

**ವಿಷಯ : 2012-13ನೇ ಸಾಲಿನ ಪಂಚ ಸೌಲಭ್ಯದಡಿ ಕುಡಿಯುವ ನೀರು ಮತ್ತು ಶೌಚಾಲಯ ನಿರ್ಮಾಣಕ್ಕೆ ಬಿಡುಗಡೆ ಮಾಡಿದ ಅನುದಾನ :**

ಬಿಜಾಪುರ:- ಹಣ ಡ್ರಾ ಮಾಡಿರುವುದಿಲ್ಲ. ಕೂಡಲೇ ಹಣ ಡ್ರಾ ಮಾಡಿ ಸಂಬಂಧಿತರಿಗೆ ಬಿಡುಗಡೆ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಯಿತು.

ಬಾಗಲಕೋಟೆ: ಧಾರವಾಡ:- ಬಿಡುಗಡೆ ಮಾಡಿರುವ ಎಲ್ಲಾ ಹಣವನ್ನು ಕೂಡಲೇ ಡ್ರಾ ಮಾಡುವಂತೆ ತಿಳಿಸಲಾಯಿತು.

ಗದಗ ಮತ್ತು ಉತ್ತರ ಕನ್ನಡ:- ಹಣ ಖರ್ಚಾಗಿರುವುದಾಗಿ ತಿಳಿಸಿರುತ್ತಾರೆ.

ಶಿರಸಿ:- 2ನೇ ಕಂತನ್ನು ಕೂಡಲೇ ಖರ್ಚು ಮಾಡುವಂತೆ ತಿಳಿಸಲಾಯಿತು.

ಗುಲ್ಬರ್ಗಾ:- ಇನ್ನು ಖರ್ಚು ಮಾಡಿರುವುದಿಲ್ಲ. ಕೂಡಲೇ ಖರ್ಚು ಮಾಡುವಂತೆ ತಿಳಿಸಲಾಯಿತು.

ಬಳ್ಳಾರಿ:- ಇನ್ನೂ ಪೂರ್ಣವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ರಾಯಚೂರು:- ಪೂರ್ಣ ಹಣವನ್ನು ಖರ್ಚು ಮಾಡುವಂತೆ ತಿಳಿಸಲಾಯಿತು.

ಕೊಪ್ಪಳ:- ಇನ್ನು ಪೂರ್ಣವಾಗಿರುವುದಿಲ್ಲ.

ಬೀದರ್:- ಎಲ್ಲಾ ಹಣ ಖರ್ಚಾಗಿರುವುದಾಗಿ ತಿಳಿಸಿರುತ್ತಾರೆ.

**ವಿಷಯ : 2007-08 ರಿಂದ 2010-11ನೇ ಸಾಲಿನಲ್ಲಿ ಮಂಜೂರಾಗಿರುವ ಶಿಕ್ಷಕರ ವಸತಿ ಗೃಹ ಸಂಕೀರ್ಣ:**

ಚಿಕ್ಕಬಳ್ಳಾಪುರ :- 1 ವಸತಿ ಗೃಹ ಹಸ್ತಾಂತರ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಚಿತ್ರದುರ್ಗ:- 2 ಹಸ್ತಾಂತರ ಮಾಡಿದ್ದಾರೆ . ಒಂದು ಮಾಡಿಲ್ಲ.

ಮೈಸೂರು:- 3ರಲ್ಲಿ 2 ಹಂಚಿಕೆ ಆಗಿದೆ. 1 ಅಂತಿಮ ಹಂತದಲ್ಲಿದೆ.

ಚಾಮರಾಜನಗರ:– ಪೂರ್ಣವಾಗಿದ್ದು 2 ಹಂಚಿಕೆಯಾಗಿದೆ.

ಚಿಕ್ಕೋಡಿ / ಬೆಳಗಾಂ:– 5ರಲ್ಲಿ 4 ಪೂರ್ಣಗೊಂಡಿದ್ದು. 1ನ್ನು ಹಸ್ತಾಂತರಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಬಿಜಾಪುರ:– 6ರಲ್ಲಿ 6 ಪೂರ್ಣಗೊಂಡಿದ್ದು 6ರಲ್ಲಿ ಶಿಕ್ಷಕರು ವಾಸಿಸುತ್ತಿದ್ದಾರೆ. ಎಲ್ಲಾ ಹಂಚಿಕೆಯಾಗಿರುತ್ತದೆ.

ಬಾಗಲಕೋಟೆ:– 1 ಲಿಂಟಲ್ 1 ಮೇಲ್ಛಾವಣಿ ಕೆಲಸ ಆಗುತ್ತಿದೆ.

ಧಾರವಾಡ:– 5 ಹಸ್ತಾಂತರ ಆಗಿದೆ. ಶಿಕ್ಷಕರಿಗೆ ಹಂಚಿಕೆಯಾಗಿದೆ. 24 ಶಿಕ್ಷಕರು ವಾಸ ಇದ್ದಾರೆ.

ಹಾವೇರಿ:– 4 ಹಸ್ತಾಂತರ ಆಗಿದೆ. ಶಿಕ್ಷಕಕರಿಗೆ ಹಂಚಲಾಗಿದೆ.

ಗುಲ್ಬರ್ಗಾ:– 16 ರಲ್ಲಿ 1 ಪ್ಲಿಂತ್, 3 ಮೇಲ್ಛಾವಣಿ, 3 ಪೂರ್ಣವಾಗಿದೆ. 9 ಹಸ್ತಾಂತರವಾಗಿದೆ.

ಯಾದಗಿರಿ:– 8ರಲ್ಲಿ 8 ಪೂರ್ಣವಾಗಿದೆ.

ಬಳ್ಳಾರಿ:– 4ರಲ್ಲಿ 3 ಪೂರ್ಣಗೊಂಡಿರುವುದಾಗಿ ತಿಳಿಸಿರುತ್ತಾರೆ.

ಬೆಳಗಾಂ ಮತ್ತು ಗುಲ್ಬರ್ಗಾ ಆಯುಕ್ತಾಲಯದ ಹಂತದಲ್ಲಿ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲೂ ಒಂದು ಸಭೆಯನ್ನು ನಡೆಸಿ ಪರಿಶೀಲನೆ ಮಾಡುವಂತೆ ಆಯುಕ್ತರು ತಿಳಿಸಿದರು. ಹಸ್ತಾಂತರಗೊಂಡ 3 ತಿಂಗಳ ನಂತರ ಖಾಲಿಯಿದ್ದಲ್ಲಿ ಇದರ ಹಣವನ್ನು ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳ ವೇತನದಲ್ಲಿ ಕಟಾಯಿಸಲಾಗುವುದೆಂದು ಆಯುಕ್ತರು ತಿಳಿಸಿದರು.

ಜನವಸತಿ ಇರುವ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಿಸುವ ಬಗ್ಗೆ ಕ್ರಮ ವಹಿಸಬೇಕು. ಎಲ್ಲಿ ಬೇಡಿಕೆ ಹೆಚ್ಚಾಗಿದೆಯೋ ಆ ಜಾಗದಲ್ಲಿ ನಿವೇಶನ ಲಭ್ಯತೆಯ ಬಗ್ಗೆ ಖಚಿತಪಡಿಸಿಕೊಂಡ ನಂತರವೇ ಮನೆ ನಿರ್ಮಿಸಲು ಕ್ರಮ ತೆಗೆದುಕೊಳ್ಳುವುದು. ನಿವೇಶನ ಲಭ್ಯವಿದ್ದು ಮೂಲ ಏಜೆನ್ಸಿಯವರು ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸದೇ ಇದ್ದಲ್ಲಿ ಅಥವಾ ಯಾವುದೇ ಕಾರಣದಿಂದ ಕಾಮಗಾರಿ ಪ್ರಾರಂಭಗೊಳ್ಳದೇ ಇದ್ದಲ್ಲಿ ಅಂತಹ ಕಾಮಗಾರಿಗಳನ್ನು ಪೋಲೀಸ್ ಹೌಸಿಂಗ್ ಕಾರ್ಪೋರೇಷನ್ ಇವರಿಗೆ ವಹಿಸಲು ಕ್ರಮ ಕೈಗೊಳ್ಳುವುದು ಮತ್ತು ವಸತಿ ಗೃಹಗಳನ್ನು ಶಾಲೆಗೆ ಹತ್ತಿರದಲ್ಲಿಯೇ ಹೊಂದಲು ಕ್ರಮೈಗೊಳ್ಳುವುದು ಸೂಕ್ತ ಎಂದು ಆಯುಕ್ತರು ತಿಳಿಸಿದರು.

ಯಾವುದೇ ವರ್ಷದ , ಯಾವುದೇ ಕಾಮಗಾರಿ ಹಣವನ್ನು ಏಜೆನ್ಸಿಯವರು ತಮ್ಮಲ್ಲಿ ಉಳಿಸಿಕೊಂಡಿದ್ದು ಈವರೆಗೆ ಯಾವುದೇ ಪ್ರಗತಿ ತೋರಿಸಿಲ್ಲದೇ ಇರುವ ಪ್ರಕರಣಗಳಲ್ಲಿ ಸದರಿ ಹಣದ ಮೇಲೆ ಸಂಚಯನಗೊಂಡ ಬಡ್ಡಿಯನ್ನು ವಸೂಲ್ಮಾಡಲು ಜಿಲ್ಲೆಗಳು ಕ್ರಮೈಗೊಳ್ಳ ತಕ್ಕದ್ದೆಂದು ಮಾನ್ಯ ಆಯುಕ್ತರು ಸೂಚಿಸಿದರು .

2012-13ನೇ ಸಾಲಿನಲ್ಲಿ ಯಾವ ಜಿಲ್ಲೆಗಳಲ್ಲಿ ವಸತಿ ಗೃಹಗಳ ಅವಶ್ಯಕತೆ ಇದೆ ಎಂಬ ಬಗ್ಗೆ ವಿವರವನ್ನು ನೀಡುವಂತೆ ತಿಳಿಸಿದರು.

**ಹಾಗೆಯೇ** , ಈ ಹಿಂದಿನ ಸಭೆಯಲ್ಲಿ ನಿರ್ಣಯಿಸಿದಂತೆ , ಎಲ್ಲ ಕಾಮಗಾರಿಗಳ ಹಾಗು ಇನ್ನಿತರೆ ಸಂಬಂಧಿತ ವಿಷಯಗಳ ವಿವರವಾದ ಪ್ರಗತಿ ಪರಿಶೀಲನೆಗೆ ಹಾಗು ಆಡಳಿತ ವಿಷಯಗಳಿಗೆ ಸಂಬಂಧಪಟ್ಟಂತೆ ಜಿಲ್ಲಾ ಉಪನಿರ್ದೇಶಕರ ಕಛೇರಿಯ ಪತ್ರಾಂಕಿತ ಸಹಾಯಕರ ಸಭೆಯನ್ನು ಪ್ರತಿ ತಿಂಗಳ ಮೊದಲನೇಯ ವಾರದಲ್ಲಿ , ಜಿಲ್ಲಾ ಉಪನಿರ್ದೇಶಕರ ಸಭೆಗೆ ಪೂರ್ವಭಾವಿಯಾಗಿ ಹಮ್ಮಿಕೊಳ್ಳಲು ಅಪರ ಆಯುಕ್ತರಿಗೆ ಮಾನ್ಯ ಆಯುಕ್ತರು ಸೂಚಿಸಿದ್ದಾರೆ . ಹಾಗೆಯೇ , ವಿಭಾಗವಾರು ಕಡತಗಳ ವಿಲೇವಾರಿ ಬಗ್ಗೆಯೂ ಗಮನಹರಿಸಲು ಆಯಾ ಅಪರ ಆಯುಕ್ತರಿಗೆ ಮಾನ್ಯ ಆಯುಕ್ತರು ಸೂಚಿಸಿದರು . ( **ಕ್ರಮ : ಎಲ್ಲ ಸಾಶಿಇ ಅಪರ ಆಯುಕ್ತರು** )

**ವಿಷಯ : 2010-11ನೇ ಸಾಲಿನಲ್ಲಿ ಪಂಚ ಸೌಲಭ್ಯ / ಕೊಠಡಿ ನಿರ್ಮಾಣ ಮತ್ತು ಪೀಠೋಪಕರಣಗಳಿಗೆ ಬಿಡುಗಡೆಯಾದ ಅನುದಾನದ ಭೌತಿಕ ವಿವರ.**

ರಾಮನಗರ:- 3 ಪೂರ್ಣವಾಗಿದೆ.

ಚಿಕ್ಕಬಳ್ಳಾಪುರ:- ಪೂರ್ಣವಾಗಿದೆ.

ಶಿವಮೊಗ್ಗ:- 19 ರಲ್ಲಿ 17 ಆಗಿದೆ. 2 ಪ್ಲಾಸ್ಟರಿಂಗ್ ಹಂತದಲ್ಲಿದೆ

ಚಿತ್ರದುರ್ಗ:- 2 ರಲ್ಲಿ ಪೂರ್ಣವಾಗಿಲ್ಲ.

ದಾವಣಗೆರೆ 6ರಲ್ಲಿ 2 ಬಾಕಿ ಇದ್ದು ಪೂರ್ಣಗೊಳಿಸಲು ತಿಳಿಸಲಾಯಿತು.

ಚಾಮರಾಜನಗರ:- 6 ರಲ್ಲಿ 2 ಬಾಕಿ ಇದ್ದು ಪೂರ್ಣಗೊಳಿಸಲು ತಿಳಿಸಲಾಯಿತು.

ಕೊಡಗು, ದಕ್ಷಿಣ ಕನ್ನಡ, ಉಡುಪಿ :- ಮುಗಿದಿದೆ.

ಬೆಳಗಾವಿ:- 59ರಲ್ಲಿ 45 ಪೂರ್ಣಗೊಂಡಿದ್ದು 5 ಚಾವಣಿ 4 ಲಿಂಟಲ್ 5 ಪಾಯ ಹಂತದಲ್ಲಿರುವುದಾಗಿ ತಿಳಿಸಿರುತ್ತಾರೆ.

ಚಿಕ್ಕೋಡಿ :- 33 ರಲ್ಲಿ 26 ಆಗಿದೆ. 7 ಚಾವಣಿ ಹಂತದಲ್ಲಿರುತ್ತದೆ.

ಬಿಜಾಪುರ :- ಪೂರ್ಣ ಆಗಿದೆ.

ಬಾಗಲಕೋಟೆ:- 6 ರಲ್ಲಿ 5 ಲಿಂಟಲ್, 1 ಚಾವಣಿ ಹಂತದಲ್ಲಿದೆ

ಧಾರವಾಡ :- 32 ರಲ್ಲಿ 28 ಆಗಿದೆ. 4 ರಲ್ಲಿ ಸೈಟ್ ಪ್ರಾಬ್ಲಮ್ ಇದ್ದು ಕೂಡಲೇ ಮಾಡಲಾಗುವುದೆಂದು ತಿಳಿಸಿರುತ್ತಾರೆ.

ಗದಗ:- 18 ರಲ್ಲಿ 14 ಆಗಿದೆ. 4 ಲಿಂಟಲ್ ಹಂತದಲ್ಲಿದೆ

ಹಾವೇರಿ:– 22 ರಲ್ಲಿ 21 ಮುಗಿದಿರುತ್ತದೆ. 1 ಲಿಂಟಲ್ ಹಂತದಲ್ಲಿದೆ

ಉತ್ತರ ಕನ್ನಡ:– 06 ರಲ್ಲಿ 6 ಮುಗಿದಿರುತ್ತದೆ.

ಶಿರಸಿ:– 14 ರಲ್ಲಿ 8 ಆಗಿದೆ. 2 ಲಿಂಟಲ್ 4 ಚಾವಣಿ ಹಂತದಲ್ಲಿದೆ

ಗುಲ್ಬರ್ಗಾ :– 35 ರಲ್ಲಿ ಎಲ್ಲ ಮುಗಿದಿರುತ್ತದೆ.

ಯಾದಗಿರಿ:– 31 ರಲ್ಲಿ 14 ಆಗಿದೆ. 2 ಲಿಂಟಲ್, 6 ಚಾವಣಿ ಹಂತದಲ್ಲಿದೆ

ಬಳ್ಳಾರಿ :– 27 ರಲ್ಲಿ

ರಾಯಚೂರು 19 ರಲ್ಲಿ 14 ಆಗಿದೆ. 5 ಪ್ರಾರಂಬವಾಗಿದೆ.

ಕೊಪ್ಪಳ :– 23 ರಲ್ಲಿ 5 ಮುಕ್ತಾಯ ಹಂತದಲ್ಲಿದೆ. 18 ಪ್ರಾರಂಭದ ಹಂತದಲ್ಲಿದೆ

ಬೀದರ್:– 9 ರಲ್ಲಿ 2 ಚಾವಣಿ ಹಂತದಲ್ಲಿದ್ದು 7 ಮುಗಿದಿರುತ್ತದೆ.

**ವಿಷಯ : 2011–12ನೇ ಸಾಲಿನಲ್ಲಿ ಮಂಜೂರಾಗಿದ್ದ ಕಾಮಗಾರಿ ,**

ಚಿತ್ರದುರ್ಗ 08 ರಲ್ಲಿ 2ಪಾಯ 4 ಚಾವಣಿ ಹಂತದಲ್ಲಿದೆ

ದಾವಣಗೆರೆ / ಚಿಕ್ಕಬಳ್ಳಾಪುರ :– ಮುಗಿದಿರುತ್ತದೆ.

ತುಮಕೂರು 02ರಲ್ಲಿ ಚಾವಣಿ ಹಂತದಲ್ಲಿರುತ್ತದೆ.

ಕೋಲಾರ :– 2 ರಲ್ಲಿ ಕೆಲಸ ಪ್ರಾರಂಭವಾಗಿದೆ.

ಉಡುಪಿ :– 2 ರಲ್ಲಿ 2 ಪಾಯ ಹಂತದಲ್ಲಿದೆ

ಮೈಸೂರು 04 ರಲ್ಲಿ ಪ್ರಾರಂಭವಾಗಿಲ್ಲ. ಎಸ್.ಡಿ.ಎಂ.ಸಿ ಅಥವಾ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದವರಿಗೆ ಕೊಟ್ಟು ಕೆಲಸ ಮುಗಿಸುವಂತೆ ತಿಳಿಸಲಾಯಿತು.

ಚಿಕ್ಕೋಡಿ :– 06 ರಲ್ಲಿ 1 ಪೂರ್ಣಗೊಂಡಿದೆ. 5 ಚಾವಣಿ ಹಂತದಲ್ಲಿದೆ.

ಬಳ್ಳಾರಿ :– 4 ಕಾಮಗಾರಿಯನ್ನು ಕೂಡಲೇ ಮುಗಿಸುವಂತೆ ತಿಳಿಸುವುದು.

**ವಿಷಯ : 2010–11ಸಾಲಿನ ಯೋಜನೆಯಡಿಯಲ್ಲಿ ಕೊಠಡಿ ನಿರ್ಮಾಣ.**

ಬೆಂಗಳೂರು ದಕ್ಷಿಣ :– 30 ಪೂರ್ಣವಾಗಿದೆ. ದಕ್ಷಿಣ ಕನ್ನಡ 05 ಪೂರ್ಣವಾಗಿದೆ. ಮಂಡ್ಯ 5 ರಲ್ಲಿ 5 ಲಿಂಟಲ್ ಲೆವೆಲ್ ಆಗಿದೆ.

**ವಿಷಯ : 2011–12ನೇ ಸಾಲಿನಲ್ಲಿ ಮಂಜೂದರಾಗಿದ್ದ ಕಾಮಗಾರಿ ,**

ಕೋಲಾರ:– 03 ರಲ್ಲಿ 3 ಪಾಯ ಹಂತದಲ್ಲಿರುವುದಾಗಿ ತಿಳಿಸಿದ್ದಾರೆ

ಬಳ್ಳಾರಿ :– 12 ರಲ್ಲಿ 3 ಪಾಯ, 6 ಲಿಂಟಲ್ ಹಂತ 3 ನಿವೇಶನ ಸಮಸ್ಯೆ ಇರುವುದಾಗಿ ತಿಳಿಸಿದ್ದಾರೆ.

ತುಮಕೂರು:– 6 ರಲ್ಲಿ ಪ್ರಾರಂಭಿಸಿರುವುದಾಗಿ ತಿಳಿಸಿದ್ದಾರೆ.

ಹಾವೇರಿ :– 03 ರಲ್ಲಿ 3 ಲಿಂಟಲ್ ಹಂತದಲ್ಲಿದೆ

ದಾವಣಗೆರೆ:– 06 ರಲ್ಲಿ 3 ಮುಗಿದಿದ್ದು 3 ಲಿಂಟಲ್ ಹಂತದಲ್ಲಿರುವುದಾಗಿ ತಿಳಿಸಿದ್ದಾರೆ.

ಮೈಸೂರು:– 03 ರಲ್ಲಿ

ಚಿಕ್ಕಬಳ್ಳಾಪುರ :– 6ರಲ್ಲಿ ಎಲ್ಲಾ ಮುಗಿದಿರುವುದಾಗಿ ತಿಳಿಸಿದ್ದಾರೆ.

ಚಿಕ್ಕೋಡಿ :– 17 ರಲ್ಲಿ 10 ಮುಗಿದಿದ್ದು 7 ಚಾವಣಿ ಹಂತದಲ್ಲಿರುವುದಾಗಿ ತಿಳಿಸಿದ್ದಾರೆ.

**ವಿಷಯ : ಯೋಜನೇತರ**

ಬೆಂಗಳೂರು ದಕ್ಷಿಣ : 05 ರಲ್ಲಿ 05 ಮುಗಿದಿರುವುದಾಗಿ ತಿಳಿಸಿದ್ದಾರೆ.

ಮೈಸೂರು :– 02 ರಲ್ಲಿ

ಉತ್ತರ ಕನ್ನಡ:– 08 ರಲ್ಲಿ ಪೂರ್ಣಗೊಳಿಸಲಾಗುವುದೆಂದು ತಿಳಿಸಿದ್ದಾರೆ.

ಉಡುಪಿ :– 10ರಲ್ಲಿ ಎಲ್ಲಾ ಮುಗಿದಿರುವುದಾಗಿ ತಿಳಿಸಿದ್ದಾರೆ.

ದಾವಣಗೆರೆ :– 16, 4 ಪಾಯ 8 ಲಿಂಟಲ್, 04 ಚಾವಣಿ ಹಂತದಲ್ಲಿರುತ್ತದೆ.

ಕೊಡಗು :– 05 ರಲ್ಲಿ 5 ಪಾಯ ಹಂತದಲ್ಲಿರುತ್ತದೆ.

ತುಮಕೂರು :– 14 ರಲ್ಲಿ 12 ಪ್ರಾರಂಭವಾಗಿರುತ್ತದೆ.

ಕೊಪ್ಪಳ:– 11 ರಲ್ಲಿ 9 ವಿವಿಧ ಹಂತದಲ್ಲಿದೆ 2 ಎಸ್ಟಿಮೇಟ್ ಮಾಡಲಾಗುತ್ತಿದೆಯೆಂದು ತಿಳಿಸಿರುತ್ತಾರೆ.

ಗದಗ :– 3 ರಲ್ಲಿ ಜಾಗದ ಸಮಸ್ಯೆ ಇರುವುದಾಗಿ ತಿಳಿಸಿದ್ದಾರೆ.

ರಾಯಚೂರು :– 4 ರಲ್ಲಿ ಎಲ್ಲಾ ಪೂರ್ಣವಾಗಿದೆಯೆಂದು ತಿಳಿಸಿದ್ದಾರೆ.

ರಾಮನಗರ :– 05 ರಲ್ಲಿ 3 ಮುಗಿದಿದ್ದು 2 ಪ್ರಾರಂಭದ ಹಂತದಲ್ಲಿರುವುದಾಗಿ ತಿಳಿಸಿದ್ದಾರೆ.

ಬಾಗಲಕೋಟೆ :– 28 ರಲ್ಲಿ 4 ಪೂರ್ಣಗೊಂಡಿದ್ದು 2 ಪಾಯ 8 ಲಿಂಟಲ್, 12 ಚಾವಣಿ ಹಂತದಲ್ಲಿದೆ. ಬೇರೆ ಬೇರೆ ಶಾಲೆಗಳಲ್ಲಿ ಕೊಠಡಿಗಳು2 ಕಡೆ ಆಗಿದೆ. ಎಲ್ಲ ಕೆಲಸ ಪ್ರಾರಂಭವಾಗಿಲ್ಲದಿರುವ ಬಗ್ಗೆ ಪ್ರತ್ಯೇಕವಾಗಿ ಪಟ್ಟಿ ಮಾಡಿ ಪ್ರಾರಂಭವಾಗದೇ ಇರುವ ಬಗ್ಗೆ 15 ದಿನಗಳಿಗೊಮ್ಮೆ ದೂರವಾಣಿಯಲ್ಲಿ ಮಾತನಾಡುವಂತೆ ಆಯುಕ್ತರು ತಿಳಿಸಿದರು.

**ವಿಷಯ : 12–13ನೇ ಸಾಲಿನಲ್ಲಿ ಯೋಜನೇತರ ಅಡಿಯಲ್ಲಿ ಸರ್ಕಾರಿ ಪ್ರೌಢಶಾಲೆಗಳಿಗೆ ಕೊಠಡಿ ನಿರ್ಮಾಣ ಮತ್ತು ಪೀಠೋಪಕರಣ ,**

ದಾವಣಗೆರೆ:– 16 ರಲ್ಲಿ 16 ಪಾಯ ಹಂತದಲ್ಲಿದೆ. ಮಂಡ್ಯ:– 1 ರಲ್ಲಿ ಪ್ರಾರಂಭವಾಗಿದೆ.

ಬೆಳಗಾಂ:– 10ರಲ್ಲಿ ಪ್ರಾರಂಭವಾಗಿದೆ.

ಕೊಡಗು 02 ರಲ್ಲಿ 02 ಪೂರ್ಣವಾಗಿದೆ.

ಬೆಂಗಳೂರು ದಕ್ಷಿಣ:– 04 ರಲ್ಲಿ 04 ಪಾಯ ಹಂತದಲ್ಲಿದೆ

ಶಿರಸಿ :– 18 ರಲ್ಲಿ 10 ಪಾಯ ಹಂತದಲ್ಲಿದ್ದು ಉಳಿಕೆ 8 ಕೊಠಡಿಗಳು ಪದವಿ ಪೂರ್ವ ಕಾಲೇಜಿನ ಕೊಠಡಿಗೆ ಮಂಜೂರಾಗಿದ್ದು ಇದನ್ನು ಬೇರೆ ಬೇರೆ ಪ್ರೌಢಶಾಲೆಗಳಿಗೆ ನೀಡುವ ಬಗ್ಗೆ ಪತ್ರ ಬರೆಯಲಾಗಿದೆ ಎಂದು ಉಪನಿರ್ದೇಶಕರು ತಿಳಿಸಿದರು.

ಉತ್ತರ ಕನ್ನಡ:– 10 ರಲ್ಲಿ 10 ಪಾಯ ಹಂತದಲ್ಲಿರುವುದಾಗಿ ತಿಳಿಸಿರುತ್ತಾರೆ.

ರಾಮನಗರ :– 03 ರಲ್ಲಿ 03 ಪಾಯ ಹಂತದಲ್ಲಿರುವುದಾಗಿ ತಿಳಿಸಿರುತ್ತಾರೆ.

ಶಿವಮೊಗ್ಗ :– 04 ರಲ್ಲಿ ಕೆಲಸ ಪ್ರಾರಂಭವಾಗಬೇಕಾಗಿದೆಯೆಂದು ತಿಳಿಸಿರುತ್ತಾರೆ.

ಬಾಗಲಕೋಟೆ :– 06 ರಲ್ಲಿ 4 ಲಿಂಟಲ್ ಲೆವೆಲ್ ನಲ್ಲಿ 2 ಚಾವಣಿ ಹಂತದಲ್ಲಿರುವುದಾಗಿ ತಿಳಿಸಿದ್ದಾರೆ.

ಮೈಸೂರು :– 02 ರಲ್ಲಿ 2 ಪಾಯ ಹಂತದಲ್ಲಿರುತ್ತದೆ.

ತುಮಕೂರು :– 06 ರಲ್ಲಿ 2 ಪಾಯ ಹಂತದಲ್ಲಿರುತ್ತದೆ.

ಕೊಪ್ಪಳ :– 08 ರಲ್ಲಿ 6 ಪಾಯ ಹಂತದಲ್ಲಿದ್ದು 2 ಕೊಠಡಿಗಳನ್ನು ಬೇರೆ ಪ್ರೌಢಶಾಲೆಗೆ ನೀಡುವಂಗೆ ತಿಳಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಬಳ್ಳಾರಿ :– 8 ರಲ್ಲಿ ಪ್ರಾರಂಭ ಮಾಡಲಾಗುವುದೆಂದು ತಿಳಿಸಿರುತ್ತಾರೆ.

ಉಡುಪಿ :– 06 ರಲ್ಲಿ ಮಕ್ಕಳು ಇಲ್ಲ ಎಂಬ ಕಾರಣಕ್ಕಾಗಿ ಪ್ರಾರಂಭಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

ದಕ್ಷಿಣ ಕನ್ನಡ :– 04 ರಲ್ಲಿ 04 ಪಾಯ ಹಂತದಲ್ಲಿರುತ್ತದೆ.

**ಅಜೆಂಡಾ 14:–**

ದಾವಣಗೆರೆ :– 4 ರಲ್ಲಿ 4 ಆಗಿದೆ.

ಮಂಡ್ಯ :– 2, ದಕ್ಷಿಣ ಕನ್ನಡ :– 6 ಕೊಡಗು 01, ಬೆಂಗಳೂರು ದಕ್ಷಿಣ 02, ಚಿತ್ರದುರ್ಗ 08, ಶಿರಸಿ 15, ಉತ್ತರ ಕನ್ನಡ 04, ಶಿವಮೊಗ್ಗ 1ರಲ್ಲಿ 1 ಪ್ರಾರಂಭವಾಗಿಲ್ಲ. ಬೆಳಗಾಂ, 1 ಪ್ರಾರಂಭವಾಗಿಲ್ಲ. ಕೊಪ್ಪಳ 4ರಲ್ಲಿ ಪ್ರಾರಂಭವಾಗಬೇಕು. ಧಾರವಾಡ 02ರಲ್ಲಿ ಪ್ರಾರಂಭಿಸಲಾಗಿದೆ. ಗದಗ 02ರಲ್ಲಿ ಪ್ರಾರಂಭಿಸಲಾಗಿದೆ.

**ವಿಷಯ :–** 2009–10ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ (ರಾಜ್ಯ ವಲಯ) ವಿವಿಧ ಕಾಮಗಾರಿಗಳ ಬಗ್ಗೆ ವರದಿ ಪ್ರೌಢಶಾಲಾ ಕೊಠಡಿಗಳ ನಿರ್ಮಾಣ.

ರಾಮನಗರ :- 9 ಶಾಲೆ 64 ಕೊಠಡಿಗಳು 48ರಲ್ಲಿ ಮುಕ್ತಾಯವಾಗಿದೆ. 16 ಪ್ರಾರಂಭಿಸಿಲ್ಲ.

ಮಧುಗಿರಿ :- 7 ಶಾಲೆ 44 ಕೊಠಡಿಗಳು ಎಲ್ಲಾ ಪೂರ್ಣವಾಗಿರುತ್ತದೆ.

ದಾವಣಗೆರೆ :- 7 ಶಾಲೆ 32 ಕೊಠಡಿಗಳು 32 ಕೊಠಡಿಗಳು ಪೂರ್ಣಗೊಂಡಿದೆ

ಚಿಕ್ಕಬಳ್ಳಾಪುರ :- 1 ಶಾಲೆ 02 ಕೊಠಡಿಗಳು 2 ಕೊಠಡಿಗಳು ಪೂರ್ಣಗೊಂಡಿದೆ.

ಚಾಮರಾಜನಗರ :- 5 ಶಾಲೆ, 36 ಕೊಠಡಿಗಳು 36 ಕೊಠಡಿಗಳು ಪೂರ್ಣಗೊಂಡಿರುತ್ತದೆ.

ಮೈಸೂರು :- 9 ಶಾಲೆ 44 ಕೊಠಡಿಗಳು. 32 ಕೊಠಡಿಗಳು ಪೂರ್ಣವಾಗಿದೆ. 4 ಕೊಠಡಿಗಳನ್ನು ಪ್ರಾರಂಭಿಸಿಲ್ಲ.

ಬಿಜಾಪುರ :- 5 ಶಾಲೆ 24 ಕೊಠಡಿಗಳು, 12 ಪಾಯ, 8 ಕೊಠಡಿಗಳು ಮುಕ್ತಾಯವಾಗಿದೆ. 4 ಪ್ರಾರಂಭಿಸಿಲ್ಲ.

ಬಾಗಲಕೋಟೆ :- 4 ಶಾಲೆ 32 ಕೊಠಡಿಗಳು, 8 ಪ್ಲಿಂತ್, 16 ಮುಕ್ತಾಯ, 8 ಚಾವಣಿ ಹಂತದಲ್ಲಿದೆ.

ಗುಲ್ಬರ್ಗಾ:- 31 ಶಾಲೆ, 196 ಕೊಠಡಿಗಳು, 64 ಪ್ಲಿಂತ್ ಹಂತ, 132 ಮುಕ್ತಾಯವಾಗಿರುತ್ತದೆ.

ಯಾದಗೀರ್ :- 21 ಶಾಲೆ, 160 56 ವಿವಿಧ ಹಂತದಲ್ಲಿದೆ. 104 ಮುಗಿದಿರುತ್ತದೆ.

ರಾಯಚೂರು :- 20 ಶಾಲೆ, 152 ಎಲ್ಲಾ ಪ್ರಾರಂಭವಾಗಿದೆ. 24 ಮುಕ್ತಾಯವಾಗಿರುತ್ತದೆ.

ಕೊಪ್ಪಳ :- 5 ಶಾಲೆ, 32 ಕೊಠಡಿಗಳು, 32 ಪೂರ್ಣಗೊಂಡಿರುತ್ತದೆ.

ಬಳ್ಳಾರಿ :- 9 ಶಾಲೆ, 64 ಕೊಠಡಿಗಳು, ಶಾಲೆಗೆ ಹೋಗುವುದಕ್ಕೆ ರಸ್ತೆಯನ್ನು ಬಿಟ್ಟಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಗ್ರಾಮ ಪಂಚಾಯತಿ / ಜಿಲ್ಲಾ ಪಂಚಾಯತಿಯವರೊಂದಿಗೆ ಚರ್ಚಿಸಿ ಕ್ರಮ ವಹಿಸುವಂತೆ ತಿಳಿಸಲಾಯಿತು. ಹಾಗೇನಾದರೂ ರಸ್ತೆಗೆ ಜಾಗ ಸಿಗದಿದ್ದಲ್ಲಿ 1 + 1 ರಂತೆ ಕಟ್ಟಡ ನಿರ್ಮಾಣ ಮಾಡಲು ಅಯುಕ್ತರು ತಿಳಿಸಿದರು.

**ಅಜೆಂಡಾ 16:-**

ಉಪನಿರ್ದೇಶಕರ ಕಛೇರಿಯಲ್ಲಿನ ಪತ್ರಾಂಕಿತ ಸಹಾಯಕರಿಗೆ ಪ್ರತಿ ಮಾಹೆ 5 ರಿಂದ 10ನೇ ದಿನಾಂಕದೊಳಗೆ ಸಭೆಯನ್ನು ಕರೆಯುವಂತೆ ಆಯುಕ್ತರು ತಿಳಿಸಿದರು.

**ಅಜೆಂಡಾ 17:-** ಎಲ್ಲೆಲ್ಲಿ ಪ್ರಾರಂಭ ಮಾಡಿಲ್ಲವೋ ಅಂತಹ ಜಿಲ್ಲೆಗಳಿಗೆ 15 ದಿನಗಳಿಗೊಮ್ಮೆ ಫಾಲೋಅಪ್ ಮಾಡುವಂತೆ ಉಪನಿರ್ದೇಶಕರು (ಯೋಜನೆ) ಇವರಿಗೆ ಆಯುಕ್ತರು ತಿಳಿಸಿದರು.

**ಅಜೆಂಡಾ 18:-** ಹಣವನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾ ಖಜಾನೆಗೆ ಬಿಲ್ಲನ್ನು ಸಲ್ಲಿಸಲಾಗಿದೆ. ಕೆಲವು ಜಿಲ್ಲೆಗಳಿಗೆ ಹಣವನ್ನು ಡ್ರಾ ಮಾಡಲಾಗಿದೆ.

**ಅಜೆಂಡಾ 19:- ಕಟ್ಟಡ ರಹಿತ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕೊಠಡಿ ನಿರ್ಮಾಣ.**

ವಿಶೇಷ ಅಭಿವೃದ್ದಿ ಯೋಜನೆಯಡಿ ಆರ್.ಎಂ.ಎಸ್.ಎ ಯಿಂದ ಒಂದು ಶಾಲೆಗಳಿಗೆ ಹಣ ಬಿಡುಗಡೆ ಮಾಡಿರುತ್ತಾರೆ. ಈ ರೀತಿ ಡೂಪ್ಲಿಕೇಟ್ ಆಗಿರುವುದರಿಂದ ಇದರ ಬದಲಿಗೆ ಬೇರೆ ಶಾಲೆಗಳಿಗೆ ಕೊಠಡಿ ನಿರ್ಮಾಣ ಮಾಡುವ ಕುರಿತು ಪತ್ರ ಬರೆಯುವಂತೆ ತಿಳಿಸಿದರು. ತೀರಾ ಅವಶ್ಯಕತೆಯಿದ್ದಲ್ಲಿ ನಿಮ್ಮ ತಾಲ್ಲೂಕುಗಳಲ್ಲಿ ಕಾಂಪೌಂಡು ನಿರ್ಮಿಸಲು ಇದೇ ಹಣವನ್ನು ನೀಡಲಾಗುವುದೆಂದು ಆಯುಕ್ತರು ತಿಳಿಸಿದರು. ಪ್ರೋಪೊಸಲ್‌ನ್ನು ಈ ತಿಂಗಳ ಒಳಗಾಗಿ ಕಳುಹಿಸಿಕೊಡುವಂತೆ ತಿಳಿಸಲಾಯಿತು.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಎಷ್ಟು ಎಷ್ಟು ಕೊಠಡಿಗಳು ಆಗಿದೆ. ಎಷ್ಟು ಕೊಠಡಿಗಳು ಬೇಕು ಎಂಬ ಬಗ್ಗೆ ವಿವರ ನೀಡುವುದು. ಅವಶ್ಯಕತೆ ಇಲ್ಲದ ಕೊಠಡಿಗಳಿಗೆ ತೀರಾ ಅವಶ್ಯಕತೆ ಇರುವ ಕಡೆ ಬಳಸಿಕೊಳ್ಳಲು ಕ್ರಮ ವಹಿಸುವುದು. ಈ ಮಾಹಿತಿಯನ್ನು ನವೆಂಬರ್ ಮಾಹೆಯ ಒಳಗಾಗಿ ನೀಡುವಂತೆ ಆಯುಕ್ತರು ತಿಳಿಸಿದರು.

<u>ದಿನಾಂಕ 20.10.2012 ರಂದು ಮಧ್ಯಾಹ್ನ ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಶಿಕ್ಷಕರ ಸದನದಲ್ಲಿ ನಡೆದ ಬೆಂಗಳೂರು ಮತ್ತು ಮೈಸೂರು ವಿಭಾಗದ ಉಪನಿರ್ದೇಶಕರು (ಆಡಳಿತ) ರವರ ಪ್ರಗತಿ ಪರಿಶೀಲನಾ ಸಭೆಯ ನಡವಳಿ.</u>

**ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ :**

ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ. ರವರು ಮಾತನಾಡುತ್ತಾ, ಶಾಲೆಗಾಗಿ ನಾವು-ನೀವು ಬಗ್ಗೆ ಡೇಟಾ ಎಂಟ್ರಿ ಕಾರ್ಯವನ್ನು ಮುಗಿಸಲು ಸೆಪ್ಟೆಂಬರ್, 30, 2012 ರವರೆಗೆ ಅವಧಿ ನೀಡಲಾಗಿತ್ತು. ಆದರೆ ಇದುವರೆವಿಗೂ ಕೇವಲ ಶೇಕಡ 90ರಷ್ಟು ಮಾತ್ರ ಡೇಟಾ ಎಂಟ್ರಿ ಕಾರ್ಯವ ಆಗಿರುವುದಾಗಿ ವಿಷಾದಿಸುತ್ತಾ, ಉಳಿದ ಡೇಟಾ ಎಂಟ್ರಿ ಕಾರ್ಯವನ್ನು ಜರೂರಾಗಿ ಮುಗಿಸಬೇಕಾಗಿ ಸೂಚಿಸಿದರು.

ನವೆಂಬರ್ 7, 2012 ರ ಬುಧವಾರದಂದು ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಾಲಾ ಗ್ರಂಥಾಲಯದ ಅಭಿವೃದ್ಧಿ ಮತ್ತು ಬಳಕೆ ಉತ್ತೇಜಿಸಲು

**‘ತೆಗೆಯಿರಿ ಪುಸ್ತಕ ಹೊರಗೆ– ಹಚ್ಚಿರಿ ಜ್ಞಾನದ ದೀವಿಗೆ’** ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ಹಾಗೂ ಶಾಲಾ ಗ್ರಂಥಾಲಯಕ್ಕೆ **‘ಶಾಲಾ ಶ್ರದ್ಧಾ ವಾಚನಾಲಯ’** ಎಂದು ನಾಮಕರಣ ಮಾಡಲು ಕ್ರಮ ಕೈಗೊಳ್ಳುವ ಕುರಿತು ನವೆಂಬರ್, 5 ಅಥವಾ 6 ರಂದು ಪತ್ರಿಕಾಗೋಷ್ಠಿ ( ಪ್ರೆಸ್ ಕಾನ್ಫರೆನ್ಸ್ ) ನಡೆಸಿ ಪ್ರಚಾರ ನೀಡಬೇಕೆಂದು ಸೂಚಿಸಿದರು. ಪುಸ್ತಕಗಳನ್ನು ಕೊಳ್ಳಲು ಈಗಾಗಲೇ ಅನುದಾನ ನೀಡಲಾಗಿದೆ. ಪುಸ್ತಕಗಳ ಮೇಳವನ್ನು ಮಾಡಿ ಪುಸ್ತಕವನ್ನು ಖರೀದಿಸಬೇಕಾಗಿ ಸೂಚಿಸಿದರು. ಎಲ್ಲಾ ಜಿಲ್ಲಾ ಉಪನಿರ್ದೇಶಕರ ಕಛೇರಿಯಿಂದ ಅಧಿಕಾರಿಗಳನ್ನು ಶಾಲೆಗಳಿಗೆ ನಿಯೋಜಿಸಿ, ಸದರಿ ಕಾರ್ಯಕ್ರಮದ ವರದಿಯನ್ನು ಕಳುಹಿಸಿಕೊಡುವಂತೆ ಸೂಚಿಸಿದರು.

ಒಟ್ಟು 2,642 ಸರ್ಕಾರಿ ಮತ್ತು ಖಾಸಗಿ ಶಾಲೆಗಳು ಪ್ರಾರಂಭವಾಗಿ 100 ವರ್ಷಗಳನ್ನು ಪೂರೈಸಿದ್ದು , ಸದರಿ ಶಾಲೆಗಳ ಬಗ್ಗೆ ಸಂಕ್ಷಿಪ್ತ ಟಿಪ್ಪಣಿಯನ್ನು ಕಳುಹಿಸಿದಲ್ಲಿ ರಾಜ್ಯ ಮಟ್ಟದಲ್ಲಿ ಕಿರುಹೊತ್ತಿಗೆಯನ್ನು ಪ್ರಕಟ ಮಾಡಲಾಗುವುದೆಂದು ತಿಳಿಸಿದರು.

**ಸದರಿಯವರ ಕಾರ್ಯಾಲಯಕ್ಕೆ ಸಂಬಂಧಪಟ್ಟಂತೆ ಈ ದಿನ ಚರ್ಚೆಯಾದ ವಿಷಯಗಳ ಕುರಿತಂತೆ , ವಿವರವಾದ ನಡವಳಿಗಳನ್ನು ಪ್ರತ್ಯೇಕವಾಗಿ ಲಗತ್ತಿಸಿದೆ .**

**ಮಾನ್ಯ ಆಯುಕ್ತರು:**

ಅಂಗವಿಕಲ ಮಕ್ಕಳು, ಶಾಲೆಯಿಂದ ಹೊರಗೆ ಉಳಿದಿರುವ ಮಕ್ಕಳು ಹಾಗು ಮೂಲಭೂತ ಸೌಕರ್ಯ ಈ ಮೂರರ ಬಗ್ಗೆ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಹೆಚ್ಚಿನ ಕಾಳಜಿ ವಹಿಸಬೇಕಾಗಿ ಮಾನ್ಯ ಆಯುಕ್ತರು ತಿಳಿಸಿದರು. ಈ ಬಗ್ಗೆ ಸರಿಯಾಗಿ ಕರ್ತವ್ಯ ನಿರ್ವಹಿಸದ ಡಿ.ವೈ.ಪಿ.ಸಿ. ರವರಿಗೆ ಆಯುಕ್ತರ ಕಡೆಯಿಂದ ನೋಟೀಸ್‌ನ್ನು ನೀಡುವುದಾಗಿ ತಿಳಿಸಿದರು.

ಡೈಸ್ ಪ್ರಕಾರ ಎಲ್ಲಾ ಶಾಲಾ ಮಕ್ಕಳಿಗೆ ಸಮವಸ್ತ್ರ ನೀಡಲಾಗಿದೆ. ಆದರೆ ಒಟ್ಟು 05 ಜಿಲ್ಲೆಗಳಿಂದ ಇದೀಗ ಹೆಚ್ಚುವರಿ ಬೇಡಿಕೆಯನ್ನು ಸಲ್ಲಿಸಲಾಗಿದೆ . ಆದರೆ , ಉದಾಹರಣೆಗೆ , ದಾವಣಗೆರೆ ಜಿಲ್ಲೆಗೆ ಭೇಟಿ ನೀಡಿದಾಗ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಹೆಚ್ಚುವರಿ ಸಂಖ್ಯೆಯಲ್ಲಿ ಸಮವಸ್ತ್ರದ ದಾಸ್ತಾನನ್ನು ಗಮನಿಸಲಾಗಿದೆ . ಈ ರೀತಿಯಾದರೆ ಬಹಳ ತೊಂದರೆಯಾಗುತ್ತದೆಯಾದ್ದರಿಂದ ಸದರಿ 05 ಜಿಲ್ಲೆಗಳವರಿಗೆ ನೋಟೀಸನ್ನು ನೀಡುವಂತೆ ಸೂಚಿಸಿದರು. ( ಕ್ರಮ : ನಿರ್ದೇಶಕರು (ಪ್ರಾಥಮಿಕ)

ಡೈಸ್ ಮಾಹಿತಿಯನ್ನು ಶೇಕಡ 99ರ ಪ್ರಮಾಣದವರೆಗೆ ಸರಿಪಡಿಸಲಾಗಿದೆ. ಆದ್ದರಿಂದ ಇನ್ನು ಮುಂದೆ ಸರ್ಕಾರದ ವತಿಯಿಂದ ನೀಡಲಾಗುವ ಪಠ್ಯ ಪುಸ್ತಕ, ಸಮವಸ್ತ್ರ, ಬೈಸಿಕಲ್ ಇನ್ನಿತರೆ ಯಾವುದೇ ಸವಲತ್ತುಗಳನ್ನು ನೀಡುವಾಗ ಡೈಸ್ ಆಧಾರದ ಶಾಲಾ ಮಾಹಿತಿಯನ್ನು ನೀಡತಕ್ಕದ್ದೆಂದು ಸೂಚಿಸಿದರು.

ಮಕ್ಕಳನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗುವಾಗ ಅವರುಗಳ ಕ್ಷೇಮದ ದೃಷ್ಟಿಯಿಂದ ಕಡ್ಡಾಯವಾಗಿ ಕೆ.ಎಸ್.ಆರ್.ಟಿ.ಸಿ. ಬಸ್ ಅನ್ನೇ ಬಳಸಲು ಸೂಚಿಸಿದರು. ತಪ್ಪಿದಲ್ಲಿ ಅಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸುವಂತೆ ಸೂಚಿಸಿದರು.

ಕುಡಿಯುವ ನೀರು/ಶೌಚಾಲಯದ ವ್ಯವಸ್ಥೆ ಕುರಿತು ಹಮ್ಮಿಕೊಂಡಿರುವ ಕ್ರಿಯಾ ಯೋಜನೆಯ ಬಗ್ಗೆ ವರದಿಯನ್ನು ಕಳುಹಿಸಿಕೊಡುವಂತೆ ಜಿಲ್ಲಾ ಉಪನಿರ್ದೇಶಕರುಗಳಿಗೆ ಮಾನ್ಯ ಆಯುಕ್ತರು ಸೂಚಿಸಿದರು.

ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರದಿಂದ 4000 ಹುದ್ದೆಗಳಿಗೆ ಮಂಜೂರಾತಿ ದೊರೆತಿದೆ. ಅವಶ್ಯಕತೆಯಿರುವ ಖಾಲಿಹುದ್ದೆಗಳ ಮಾಹಿತಿಯನ್ನು ಇ–ಮೇಲ್ ಮುಖೇನ ಎಲ್ಲಾ ಜಿಲ್ಲೆಗಳು ಜರೂರಾಗಿ ಕಳುಹಿಸಿಕೊಡಬೇಕೆಂದು ಮಾನ್ಯ ಆಯುಕ್ತರು ತಿಳಿಸಿದರು.

**ಇದೇ ಸಂದರ್ಭದಲ್ಲಿ ಮಾತನಾಡಿದ ಪ್ರಾಥಮಿಕ ಶಿಕ್ಷಣ ನಿರ್ದೇಶಕರು ,**

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಅನುದಾನಿತ ಶೈಕ್ಷಣಿಕ ಸಂಸ್ಥೆಗಳಲ್ಲಿ ಬಾಕಿಯಿರುವ ಬ್ಯಾಕ್‌ಲಾಗ್ ಹುದ್ದೆಗಳ ವಿವರಗಳನ್ನು ಪರಿಶೀಲಿಸಲು ತಂಡವನ್ನು ರಚಿಸಿದ್ದು, ಈ ತಂಡಕ್ಕೆ ಅತಿ ತುರ್ತಾಗಿ ಮಾಹಿತಿಯನ್ನು ನೀಡಬೇಕಾಗಿರುತ್ತದೆ. ಆದ್ದರಿಂದ ಈಗಾಗಲೇ ಕಳುಹಿಸಿಕೊಡಲಾಗಿರುವ ನಮೂನೆಯಲ್ಲಿ ಬಾಕಿಯಿರುವ ಬ್ಯಾಕ್‌ಲಾಗ್ ಹುದ್ದೆಗಳ ಮಾಹಿತಿಯನ್ನು ತುರ್ತಾಗಿ ಕಳುಹಿಸಿಕೊಡುವಂತೆ ಸೂಚಿಸುತ್ತಾ, ಎಸ್.ಸಿ.ಮತ್ತು ಎಸ್. ಟಿ. ಆಡಳಿತ ಮಂಡಳಿಗಳು ನಡೆಸುತ್ತಿರುವ ಶಾಲೆಗಳಲ್ಲಿ ಎಸ್.ಸಿ./ಎಸ್.ಟಿ. ಮಕ್ಕಳು ಎಷ್ಟು? ಹಾಗು ಸಾಮಾನ್ಯ ಅಭ್ಯರ್ಥಿಗಳೆಷ್ಟು? ಎಂಬ ಬಗ್ಗೆ ಮಾಹಿತಿಯನ್ನು ಕಳುಹಿಸಿಕೊಡಲು ನಿರ್ದೇಶಕರು , ಪ್ರಾಥಮಿಕ ಶಿಕ್ಷಣ , ಇವರು ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಚಿಸಿದರು .

( ಕ್ರಮ : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

ಹಾಗೆಯೇ , ಸೇವಾ ಭದ್ರತೆ ಮಾಹಿತಿ ಹಾಗು ಅನುದಾನ ರಹಿತ ಶಾಲೆಯಲ್ಲಿ ಶಿಕ್ಷಕರ ಸೇವಾ ಪುಸ್ತಕ ಮತ್ತು ಬ್ಯಾಂಕ್ ಅಕೌಂಟ್ ಪ್ರಾರಂಭಿಸಿರುವ ಬಗ್ಗೆ ಮಾಹಿತಿಯನ್ನು ಕಳುಹಿಸಿಕೊಡಲು ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಚಿಸಿದರು . (ಕ್ರಮ : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

ಮುಂದುವರೆದು , ಜಿಲ್ಲೆಯಲ್ಲಿನ ನ್ಯಾಯಾಲಯ ಪ್ರಕರಣಗಳ ಮಾಹಿತಿಯನ್ನು ಹಾಗು ಆರ್.ಟಿ.ಇ. ಶುಲ್ಕ ಮರುಪಾವತಿ ಬಗೆಗಿನ ಮಾಹಿತಿಯನ್ನು ಜರೂರಾಗಿ ಸಲ್ಲಿಸಲು ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಚಿಸಿದರು (ಕ್ರಮ : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

ಎಲ್ಲಾ ಜಿಲ್ಲೆಗಳಿಗೆ ಈಗಾಗಲೇ ಮಕ್ಕಳ ನೋಟ್ ಪುಸ್ತಕಗಳನ್ನು ಸರಬರಾಜಿಸಿರುವುದನ್ನು ನಿರ್ದೇಶಕರು ಪ್ರಸ್ತಾಪಿಸಿ ಮಾತನಾಡುತ್ತಾ , ಸದರಿ ಪುಸ್ತಕಗಳ ಗುಣಮಟ್ಟದ ಪರೀಕ್ಷಣೆಗೆ ಸರಬರಾಜಾಗಿರುವ ಪುಸ್ತಕಗಳ ದಾಸ್ತಾನಿನಿಂದ ಎರಡೆರಡು ಪುಸ್ತಕಗಳ ಸ್ಯಾಂಪಲ್‌ನ್ನು ತಮ್ಮ ಅಭಿಪ್ರಾಯ ವರದಿ ಸಹಿತವಾಗಿ ಆಯುಕ್ತಾಲಯಕ್ಕೆ ಜಿಲ್ಲಾ ಉಪನಿರ್ದೇಶಕರು ಮರು ಟಪಾಲಿನಲ್ಲಿ ಕಳುಹಿಸುವಂತೆ ತಿಳಿಸಿದರು. (ಕ್ರಮ : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

**ಇದೇ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕರು, ಇತರೆ ಪರೀಕ್ಷೆಗಳು ,**

ಪರೀಕ್ಷಾ ಮಂಡಳಿಯಲ್ಲಿ ಪ್ರತಿಯೊಂದು ಪರೀಕ್ಷೆಗೆ ಹಣ ತುಂಬಲು ಎನ್.ಇ.ಎಫ್.ಟಿ. ಚಲನ್ ಬಳಸಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ಹಣ ತುಂಬಿ ಚಲನ್ ಪ್ರತಿ ಹಾಗು ವಿವರಗಳನ್ನು ಮಂಡಳಿಗೆ ಕಳುಹಿಸಿಕೊಡಬೇಕೆಂದು ತಿಳಿಸಿದರು.

**ಇದೇ ಸಂದರ್ಭದಲ್ಲಿ ಮಾತನಾಡಿದ ಆಯುಕ್ತರ ಕಛೇರಿಯ ಪ್ರೌಢ ಶಿಕ್ಷಣ ಉಪನಿರ್ದೇಶಕರು ,**

ಹಿಂದಿನ ಸಭೆಯಲ್ಲಿ , ಸಿಬ್ಬಂದಿ – 4 ರ ಶಾಖೆಯಿಂದ ಕಳುಹಿಸಲಾಗಿದ್ದ 26 **ಅಜೆಂಡಾಗಳಿಗೆ** ಮಾಹಿತಿಗಳನ್ನು ಪರಿಪೂರ್ಣವಾಗಿ ಕಳುಹಿಸಿರುವುದಿಲ್ಲ. ಮಾಹಿತಿಗಳನ್ನು ಸರಿಯಾಗಿ ನೀಡದೇ ಇರುವವರು ಆದಷ್ಟು ಜರೂರಾಗಿ ಇ–ಮೇಲ್ ಮುಖೇನ ಕಳುಹಿಸಿಕೊಡುವಂತೆ ತಿಳಿಸಿದರು.

ಸದರಿ , **ಅಜೆಂಡಾ 1 ಮತ್ತು 2 ರಲ್ಲಿ** , 2012–13 ನೇ ಸಾಲಿನ ಸರ್ಕಾರಿ ಪ್ರೌಢ ಶಾಲಾ ಹೆಚ್ಚುವರಿ ಶಿಕ್ಷಕರ ಸ್ಥಳಾಂತರದ ಮಾಹಿತಿ,

**<u>ಅಜೆಂಡಾ– 08</u>** , ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್–2 ಹುದ್ದೆಗೆ ಬಡ್ತಿ ಪ್ರಕ್ರಿಯೆ ಪ್ರಾರಂಭಿಸಿ ದಿನಾಂಕ 25.9.2012 ರೊಳಗೆ ಪೂರ್ಣಗೊಳಿಸಲು ಸೂಚಿಸಿರುವಂತೆ ಬಡ್ತಿ ನೀಡಿರುವ ಬಗ್ಗೆ ವರದಿಯನ್ನು ಜರೂರಾಗಿ ಕಳುಹಿಸಿಕೊಡುವುದು. ಹಾಗು ದಕ್ಷಿಣ ಕನ್ನಡ ಜಿಲ್ಲೆಯವರು ಹಿಂದಿ ಹುದ್ದೆ ಬಡ್ತಿಗೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮ ಹಾಗೂ ಬಡ್ತಿ ವರದಿಯನ್ನು ಕಳುಹಿಸಿಕೊಡುವುದು ,

**<u>ಅಜೆಂಡಾ– 11</u>** , ಕರ್ನಾಟಕ ವಿಧಾನ ಮಂಡಲ ಅನುಸುಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯಲ್ಲಿ ಕೈಗೊಂಡ ನಿರ್ಣಯದ ಬಗ್ಗೆ ಅಂದರೆ, ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರದಿಂದ ಅನುದಾನ ಪಡೆಯುವ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಬಡ್ತಿಯಲ್ಲಿ ಮೀಸಲಾತಿಯನ್ನು ನೀಡುವ ಬಗ್ಗೆ ಆಗುತ್ತಿರುವ ತಾರತಮ್ಯ / ಮೀಸಲಾತಿಯನ್ವಯ ಬಡ್ತಿ ನೀಡಿಲ್ಲದಿರುವುದರ ಕುರಿತು ಮಾಹಿತಿ ,

ಹಾಗು , **<u>ಅಜೆಂಡಾ– 13</u>** ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರ ಮಾಹಿತಿಯನ್ನು ಬಹಳ ಜರೂರಾಗಿ ಕಳುಹಿಸಿಕೊಡಬೇಕೆಂದು ತಿಳಿಸಿದರು.

ಸರ್ಕಾರಿ ಪ್ರೌಢ ಶಾಲೆಗಳ ನಿವೇಶನ ಒತ್ತುವರಿಯಾಗಿರುವ ಬಗೆಗಿನ ವಿವರಗಳನ್ನು ಕೋಲಾರ, ಮಧುಗಿರಿ, ಚಿತ್ರದುರ್ಗ, ಚಾಮರಾಜನಗರ, ಹಾಸನ, ಬಿಜಾಪುರ, ಧಾರವಾಡ, ಯಾದಗಿರಿ, ರಾಯಚೂರು ಮತ್ತು ಬೀದರ್ ಜಿಲ್ಲೆಗಳವರು ಈವರೆಗೆ ಸಲ್ಲಿಸಿರುವುದಿಲ್ಲ. ಸರ್ಕಾರಿ ಜಮೀನಿಗೆ ಸಂಬಂಧಪಟ್ಟಂತೆ ಪ್ರತಿಯೊಬ್ಬರು ಖಾತೆಯನ್ನು ಮಾಡಿಸಿ ಮಾಹಿತಿಯನ್ನು ಕಳುಹಿಸಿಕೊಡುವಂತೆ ತಿಳಸಿದರು .

1984 ರಲ್ಲಿ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರು ನೇಮಕವಾಗಿದ್ದರು. 1991 ರಲ್ಲಿ ಸದರಿ ಗುತ್ತಿಗೆ ಆಧಾರದ ಶಿಕ್ಷಕರನ್ನು ಸೇವಾ ಖಾಯಂ ಮಾಡಬೇಕೆಂದು ಕೋರ್ಟ್ ಆದೇಶಿಸಿರುತ್ತದೆ. ಸದರಿ ಶಿಕ್ಷಕರಿಗೆ ಸೇವಾ ಪೇ ಅರಿಯರ್ಸ್ ಕೊಡುವ ಹಾಗೆ ಇರಲಿಲ್ಲ. ಆದರೆ ಕೆಲವು ಜಿಲ್ಲೆಗಳಲ್ಲಿ ಪೇ ಅರಿಯರ್ಸ್‌ನ್ನು ನೀಡಲಾಗಿದೆಯೆಂಬ ಬಗ್ಗೆ ಮಾಹಿತಿ ಬಂದಿರುವುದರಿಂದ ಸದರಿ ವಿಷಯದ ಬಗ್ಗೆ ಮಾಹಿತಿ ಹಾಗೂ ಎಲ್ಲಾ ಶಿಕ್ಷಕರಿಗೂ ಪೇ ಅರಿಯರ್ಸ್ ನೀಡಲು ಎಷ್ಟು ಅನುದಾನ ಬೇಕಾಗಬಹುದೆಂಬ ಬಗ್ಗೆ ಮಾಹಿತಿಯನ್ನು ಮುಂದಿನ ಸಭೆಗೆ ತರುವಂತೆ ತಿಳಿಸಿದರು.

**ಇದೇ ಸಂದರ್ಭದಲ್ಲಿ ಮಾತನಾಡಿದ ಪ್ರೌಢ ಶಿಕ್ಷಣ ಹಿರಿಯ ಸಹಾಯಕ ನಿರ್ದೇಶಕರು ,**

ಅನುದಾನಿತ ಪ್ರೌಢ ಶಿಕ್ಷಣ ಶಾಖೆಯಡಿ 08 ಅಜೆಂಡಾಗಳನ್ನು ಕಳುಹಿಸಿಕೊಡಲಾಗಿತ್ತು. ಈ ಕೆಳಕಂಡ ಜಿಲ್ಲೆಯವರು ಮಾಹಿತಿಯನ್ನು ನೀಡಿಲ್ಲವೆಂಬುದನ್ನು ಮಾನ್ಯ ಆಯುಕ್ತರ ಗಮನಕ್ಕೆ ತಂದರು ,

ಖಾಸಗಿ ಅನುದಾನಿತ/ಅನುದಾನರಹಿತ ಪ್ರೌಢ ಶಾಲೆಗಳ ಮಾನ್ಯತೆ ನವೀಕರಣ – ಈ ಬಗ್ಗೆ ಗುಲಾಬಿ ಬಣ್ಣದ ಪತ್ರದಲ್ಲಿ ಅರೆ ಸರ್ಕಾರಿ ಪತ್ರವನ್ನು ಬರೆಯಲಾಗಿದೆ. 12 ಜಿಲ್ಲೆಗಳಿಂದ ಮಾಹಿತಿ ಬಂದಿರುವುದಿಲ್ಲ. 1) ಬೆಂ. ಗ್ರಾಮಾಂತರ 2) ತುಮಕೂರು 3) ದಾವಣಗೆರೆ 4) ಕೋಲಾರ 5) ಮೈಸೂರು 6) ಬಿಜಾಪುರ 7) ಧಾರವಾಡ 8) ಹಾವೇರಿ 9) ಬಾಗಲಕೋಟೆ 10) ಶಿರಸಿ 11) ಬಳ್ಳಾರಿ ಮತ್ತು ಗುಲ್ಬರ್ಗಾ ಜಿಲ್ಲೆ.

ಸರ್ವೋಚ್ಛ ನ್ಯಾಯಾಲಯದಲ್ಲಿ ಇಲಾಖಾ ವತಿಯಿಂದ ಹೂಡಿರುವ ಅನುದಾನರಹಿತ ಶಿಕ್ಷಕರು / ಸಿಬ್ಬಂದಿ ವರ್ಗಕ್ಕೆ ನ್ಯಾಯಾಲಯದ ಆದೇಶದಂತೆ ಸೌಲಭ್ಯ ನೀಡುವ ಬಗ್ಗೆ ಚಿಕ್ಕಬಳ್ಳಾಪುರ ಜಿಲ್ಲೆ ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲೆಗಳಿಂದ ಮಾಹಿತಿ ಬರಬೇಕಾಗಿರುತ್ತದೆ.

ಮಾನ್ಯ ಉಚ್ಛ ನ್ಯಾಯಾಲಯದ ಪ್ರಕರಣಗಳ ಕುರಿತು ಜಿಲ್ಲೆಗಳಿಂದ ಮಾಹಿತಿ ಬಂದಿಲ್ಲ .

ಅನುದಾನಿತ ಶಾಲೆಗಳಲ್ಲಿನ ಎಸ್.ಡಿ.ಸಿ. ಖಾಲಿ ಹುದ್ದೆಗಳ ಉರಿತಂತೆ ಜಿಲ್ಲೆಗಳಿಂದ ಮಾಹಿತಿ ಬಂದಿಲ್ಲ .

ಅನುದಾನಿತ ಪ್ರೌಢ ಶಾಲೆಗಳಲ್ಲಿ ವಿವಾದಗಳಿದ್ದು ಅಂತಹ ಶಾಲೆಗಳಿಗೆ ಪಿ.ಡಿ.ಓ. / ನಿಯಮ ಸಂಖ್ಯೆ 67 ರಂತೆ ವಿಶೇಷಾಧಿಕಾರಿ ನೇಮಕ / ಆಡಳಿತಾಧಿಕಾರಿಗಳನ್ನು ನೇಮಕ ಮಾಡಿರುವ ಕುರಿತು ಈ ಹಿಂದೆ ಕಳುಹಿಸಿಕೊಡಲಾಗಿರುವ ನಮೂನೆಯಲ್ಲಿ ಮಾಹಿತಿ ವರದಿಯನ್ನು ಸದರಿ ಜಿಲ್ಲೆಗಳವರು ಕಳುಹಿಸಿಕೊಡಬೇಕಾಗಿದೆ ಎಂದು ತಿಳಿಸಿದರು .

ಇದನ್ನು ಅವಲೋಕಿಸಿದ ನಂತರ ಸದರಿ ಎಲ್ಲ ವಿವರಗಳನ್ನು / ಮಾಹಿತಿ ವರದಿಗಳನ್ನು ಜರೂರಾಗಿ ಕಳುಹಿಸಿಕೊಡುವಂತೆ ಜಿಲ್ಲಾ ಉಪನಿರ್ದೇಶಕರುಗಳಿಗೆ ಮಾನ್ಯ ಆಯುಕ್ತರು ಸೂಚಿಸಿದರು

**ಇದೇ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ಪಠ್ಯ ಪುಸ್ತಕದ ವ್ಯವಸ್ಥಾಪಕ ನಿರ್ದೇಶಕರು,**

ಹಿಂದಿನ ಉಪನಿರ್ದೇಶಕರ ಸಭೆ ಹಾಗು ನೋಡೆಲ್ ಅಧಿಕಾರಿಗಳ ಸಭೆಯಲ್ಲಿ ತಿಳಿಸಿದಂತೆ ಶಾಲೆಗಳ ಪುಸ್ತಕ ಬೇಡಿಕೆ ಕುರಿತಾದ ಸರಿಯಾದ ಅಂಕಿ ಸಂಖ್ಯೆಗಳನ್ನು ಕಳುಹಿಸಿಕೊಡದೇ ಇರುವವರು ಸರಿಯಾದ ಮಾಹಿತಿಯನ್ನು ಕಳುಹಿಸುವಂತೆ ಸೂಚಿಸಿದರು.

2012–13ನೇ ಶೈಕ್ಷಣಿಕ ವರ್ಷದ ಮಾರಾಟ ಪುಸ್ತಕಗಳ ಮಾರಾಟದ ಹಣವು ಕೆಲವು ಜಿಲ್ಲೆಗಳಿಂದ ಪೂರ್ಣವಾಗಿ ಸಂಘಕ್ಕೆ ಪಾವತಿಯಾಗಿಲ್ಲ . ಸದರಿ ಸಾಲಿಗೆ ಯಾವ್ಯಾವ ಶಾಲೆಯವರು ಎಷ್ಟೆಷ್ಟು ಪುಸ್ತಕಗಳಿಗೆ ಇಂಡೆಂಟ್ ನೀಡಿರುತ್ತಾರೋ ಅಷ್ಟು ಪುಸ್ತಕಗಳ ಹಣವನ್ನು ಜರೂರಾಗಿ ವಸೂಲಿಸಿ ಸಂಘಕ್ಕೆ ಪಾವತಿಸುವ ಕ್ರಮವನ್ನು ಕೈಗೊಳ್ಳಲು ಸೂಚಿಸಿದರು.

**ಇದೇ ಸಂದರ್ಭದಲ್ಲಿ ಮಾತನಾಡಿದ , ಅಲ್ಪ ಸಂಖ್ಯಾತ ನಿರ್ದೇಶನಾಲಯ ನಿರ್ದೇಶಕರು ,**

ಮದರಸಾ ಶಾಲೆಗಳಿಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದೆ. ಸದರಿ ಶಾಲೆಗಳು ಅಸ್ತಿತ್ವದಲ್ಲಿ ಇದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಮಾಹಿತಿಯನ್ನು ಜರೂರಾಗಿ ಕಳುಹಿಸಿಕೊಡುವಂತೆ ಉಪನಿರ್ದೇಶಕರುಗಳಿಗೆ ತಿಳಿಸಿದರು.

**ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.**

**ನಿರ್ದೇಶಕರು (ಪ್ರೌಢ ಶಿಕ್ಷಣ)**

**ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)**

**ಆಯುಕ್ತರು ,**
**ಸಾರ್ವಜನಿಕ ಶಿಕ್ಷಣ ಇಲಾಖೆ**

ದಿನಾಂಕ: 20.10.2012 ರಂದು ಮಾನ್ಯ ಆಯುಕ್ತರ ಕಚೇರಿ ವತಿಯಿಂದ ನಡೆಸಲಾದ ರಾಜ್ಯ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಇವರಿಗೆ ನಡೆಸಿದ ಸಭೆಯ ಅವಧಿಯಲ್ಲಿ ಚರ್ಚಿಸಲಾದ ಸರ್ವ ಶಿಕ್ಷಣ ಅಭಿಯಾನದ ಸಭಾ ನಡವಳಿ.

*****

**ಎಸ್‌ಎಸ್‌ಎ**

ಕೊಪ್ಪಳ ಜಿಲ್ಲೆಯಲ್ಲಿ ಶಿಕ್ಷಕರ ವೇತನ ಬಟವಾಡೆ ಮಾಡಲು ಶಿಕ್ಷಕರನ್ನು ಮುಂದುವರಿಸಲು ಸರ್ಕಾರದಿಂದ ನೀಡಿದ ಮುಂದುವರಿದ ಆದೇಶದ ಪ್ರತಿಯನ್ನು ನೀಡುವಂತೆ ಖಜಾನಾಧಿಕಾರಿಗಳು ತಿಳಿಸಿದ್ದು, ವೇತನ ಪಾವತಿ ಆಗುತ್ತಿಲ್ಲದ ಬಗ್ಗೆ ಉಪನಿರ್ದೇಶಕರು (ಆ) ಕೊಪ್ಪಳ ಇವರು ಸಭೆಯ ತಿಳಿಸಿದ ಹಿನ್ನೆಲೆಯಲ್ಲಿ ಸಹ ನಿರ್ದೇಶಕರು (ಆಡಳಿತ), ಸಶಿಅ ಇವರು ಸಮರ್ಥನೆ ನೀಡುತ್ತಾ, ಈ ಸಂಬಂಧ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅನುಮತಿ ಬಂದ ಕೂಡಲೇ ಮಾಹಿತಿ ನೀಡಲಾಗುವುದೆಂಬ ಅಂಶವನ್ನು ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಶಿಅ ಇವರ ಅವಗಾಹನೆಗೆ ತಂದ ಮೇರೆಗೆ ಅನುಮತಿ ದೊರೆಯುವವರೆಗೆ ಈ ವಿಷಯವನ್ನು ಹಿಂಬಾಲಿಸಿ ಅನುಮತಿ ಪತ್ರ ಕಳುಹಿಸಲು ಕ್ರಮ ವಹಿಸುವಂತೆ ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ಸೂಚಿಸಿದರು.

ಡೈಸ್‌ನಲ್ಲಿ 1 ರಿಂದ 10 ನೇ ತರಗತಿವರೆಗಿನ ವಿದ್ಯಾರ್ಥಿಗಳ ದಾಖಲಾತಿ ಮಾಹಿತಿಯನ್ನು ಸಾಫ್ಟ್‌ವೇರ್‌ನಲ್ಲಿ ದಾಖಲಿಸಲು ದಿನಾಂಕ: 30.09.2012 ನ್ನು ಕೊನೆ ದಿನಾಂಕವಾಗಿ ನಿಗಧಿಪಡಿಸಲಾಗಿತ್ತು. ಆದರೆ ಬೆಂಗಳೂರು ದಕ್ಷಿಣ ಜಿಲ್ಲೆಯಿಂದ ಇದುವರೆಗೆ ಸಂಪೂರ್ಣ ಮಾಹಿತಿ ದಾಖಲಾಗಿಲ್ಲದ ಸಭೆಯಲ್ಲಿ ಬಗ್ಗೆ ಪ್ರಸ್ತಾಪಿಸಿದ್ದು, ಇದುವರೆಗೆ ಪೂರ್ಣ ಹಾಗೂ ನಿಖರ ಮಾಹಿತಿ ನೀಡಿಲ್ಲದ ಜಿಲ್ಲೆಗಳವರಿಗೆ ನೋಟೀಸ್ ಜಾರಿ ಮಾಡಲು, ಸಮರ್ಪಕವಾದ ಉತ್ತರ ಬಾರದಿದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಲು ಕಡತ ಚಾಲನೆ ಮಾಡುವಂತೆ ಮಾನ್ಯ ನಿರ್ದೇಶಕರು (ಕಾ), ಸಶಿಅ ಇವರು ತಿಳಿಸಿದರು.

ಮುಂದುವರಿಯುತ್ತಾ ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಶಿಅ ಇವರು ಡೈಸ್‌ನಲ್ಲಿ ತಪ್ಪು ಮಾಹಿತಿ ನೀಡಿ, ಸರ್ಕಾರದಿಂದ ದೊರೆಯುವ ಉಚಿತ ಸಮವಸ್ತ್ರ, ಪಠ್ಯ ಪುಸ್ತಕ, ಬೈಸಿಕಲ್, ಮಧ್ಯಾಹ್ನದ ಉಪಾಹಾರ ಇತ್ಯಾದಿ ಸೌಲಭ್ಯಗಳು ದೊರೆಯುವಲ್ಲಿ ವ್ಯತ್ಯಾಸ ಉಂಟಾದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು, ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಪರಿಶೀಲಿಸಿ ನಿಖರ ಮಾಹಿತಿಯನ್ನು ನೀಡಲು ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ಒತ್ತಿ ಹೇಳಿದರು. ಮುಂದುವರಿಯುತ್ತಾ, ಬೀದರ್, ಹಾವೇರಿ, ಗುಲ್ಬರ್ಗ, ಧಾರವಾಡ, ಮೈಸೂರು, ರಾಯಚೂರು, ಬೆಂಗಳೂರು ಉತ್ತರ ಮತ್ತು ದಕ್ಷಿಣ, ಮತ್ತು ಯಾದಗಿರಿ ಜಿಲ್ಲೆಯ ಮಾಹಿತಿಯಲ್ಲಿ ವ್ಯತ್ಯಾಸ ಕಂಡು ಬರುತ್ತಿದ್ದು, 25 ನೇ ನವೆಂಬರ್ 2012 ರವರೆಗೆ ಅವಧಿಯಲ್ಲಿ ವಿಸ್ತರಿಸಲಾಗಿದ್ದು, ಸಂಬಂಧಿಸಿದ ಜಿಲ್ಲೆಗಳವರು ಪರಿಶೀಲಿಸಿ ನಿಖರ ಮಾಹಿತಿಯನ್ನು ನೀಡುವಂತೆ ಮತ್ತೊಮ್ಮೆ ಸೂಚಿಸಲಾಯಿತು.

ದಿನಾಂಕ: 07.11.2012 ರಂದು "ಗ್ರಂಥಾಲಯ ದಿನ" ವನ್ನಾಗಿ ಆಚರಿಸಲು ಸನ್ಮಾನ್ಯ ಶಿಕ್ಷಣ ಸಚಿವರು ಸೂಚಿಸಿದ್ದು, ಈ ಸಂಬಂಧ ಇಲಾಖೆಯಿಂದ ನೀಡಲಾಗಿರುವ ಸುತ್ತೋಲೆಯಂತೆ ಕ್ರಮ ವಹಿಸುವುದು, ಹಾಗೂ ದಿನಾಂಕ:05-11-2012 ಮತ್ತು 06-11-2012 ರಂದು ಈ ಸಂಬಂಧ ಹೆಚ್ಚಿನ ಪ್ರಚಾರ ಕೈಗೊಳ್ಳಬೇಕೆಂದು ಸಹ ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ತಿಳಿಸಿದರು. ಅಲ್ಲದೆ ಒಂದು ಮಗುವಿಗೆ ಶಾಲೆಗಳಲ್ಲಿ ಕನಿಷ್ಠ ತಿಂಗಳಿಗೆ ಒಂದು ಪುಸ್ತಕವನ್ನಾದರೂ ಕಡ್ಡಾಯವಾಗಿ ನೀಡುವಂತಾಗಬೇಕು, ಇದರಿಂದಲೂ ಸಹ ಮಗುವಿನ ಓದಿನ ಆಸಕ್ತಿ ಉಂಟಾಗಲು ಕಾರಣವಾಗುತ್ತದೆ ಎಂಬ ಮಾತನ್ನು ಸಹ ಒತ್ತಿ ಹೇಳಿದರು.

ಉನ್ನತೀಕರಿಸಿದ ಶಾಲೆಗಳಲ್ಲಿ 7 ನೇ ತರಗತಿಯಲ್ಲಿ ಇದ್ದಂತಹ ಎಲ್ಲಾ ಮಕ್ಕಳೂ ಸಹ ಉನ್ನತೀಕರಿಸಿದ 8 ನೇ ತರಗತಿಗೆ ದಾಖಲಾಗಿದ್ದಾರೆಯೇ, ದಾಖಲಾಗದಿದ್ದಲ್ಲಿ ಎಲ್ಲಿದ್ದಾರೆ, ಯಾವ ಶಾಲೆಗೆ ದಾಖಲಾಗಿದ್ದಾರೆ, ಶಾಲೆಯಿಂದ

ಹೊರಗುಳಿದಿದ್ದಾರೆಯೇ ಎಂಬ ಮಾಹಿತಿಯನ್ನು ಕಡ್ಡಾಯವಾಗಿ ರಾಜ್ಯ ಕಛೇರಿಗೆ ಕಳುಹಿಸಿಕೊಡುವಂತೆ ಸೂಚಿಸಲಾಯಿತು. ಮುಂದುವರಿಯುತ್ತಾ, ಶೂನ್ಯ ದಾಖಲಾತಿ ಸಂಬಂಧ ಹಾವೇರಿ, ಚಿಕ್ಕಬಳ್ಳಾಪುರ, ತುಮಕೂರು, ಹಾಸನ, ಮೈಸೂರು ಜಿಲ್ಲೆಗಳವರು ಸ್ಪಷ್ಟ ಮಾಹಿತಿಯನ್ನು ನೀಡುವಂತೆ ಸಹ ಸೂಚಿಸಲಾಯಿತು.

ಸಾಕಷ್ಟು ಜಿಲ್ಲೆಗಳಲ್ಲಿ ರೀ ಫರ್ಬಿಷಿಂಗ್ ಕಾರ್ಯ ಇದುವರೆಗೆ ಆಗಿಲ್ಲದಿರುವ ಬಗ್ಗೆ ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ವಿಷಾದ ವ್ಯಕ್ತಪಡಿಸುತ್ತಾ, ಅಕ್ಟೋಬರ್ ಮಾಹೆ ಮುಗಿಯುತ್ತಿದ್ದರೂ ಸಹ ಈ ಕಾರ್ಯ ಆಗದಿದ್ದಲ್ಲಿ ಮಕ್ಕಳಿಗೆ ಬಹಳ ತೊಂದರೆ ಆಗುತ್ತದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದ ಹಿನ್ನೆಲೆಯಲ್ಲಿ, ಕಾರ್ಯಕ್ರಮಾಧಿಕಾರಿ, ಒಓಎಸ್‌ಸಿ ಇವರು ದನಿಗೂಡಿಸುತ್ತಾ, ಎನ್‌ಜಿಒಗಳವರು ಕಾರ್ಯಕ್ರಮ ನಡೆಸಲು ಸಿದ್ಧರಿದ್ದು, ಜಿಲ್ಲಾ ಹಂತದಲ್ಲಿ ಆಗಬೇಕಾದ ಕ್ರಮ ಆಗಿಲ್ಲದ ಪ್ರಯುಕ್ತ ತಾವು ಯಾವುದೇ ಕಾರ್ಯಕ್ರಮ ನಡೆಸಲು ಕುಂಠಿತವಾಗುತ್ತಿದೆ ಎಂದು ರಾಜ್ಯ ಕಛೇರಿಯೊಂದಿಗೆ ಸಂಪರ್ಕಿಸುತ್ತಿದ್ದು, ಸಂಬಂಧಿಸಿದ ಜಿಲ್ಲೆ/ತಾಲ್ಲೂಕಿನ ಅಧಿಕಾರಿಗಳು ವೈಯುಕ್ತಿಕ ಗಮನಹರಿಸಿ ಎನ್‌ಜಿಒರವರ ಜೊತೆ ಎಂಒಯು ಮಾಡಿಕೊಂಡು ತುರ್ತಾಗಿ ಕಾರ್ಯಕ್ರಮ ಪ್ರಾರಂಭಿಸಬೇಕೆಂಬ ಮಾತನ್ನು ಹೇಳಿದರು. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಶಿಅ ಇವರು ಮುಂದುವರಿಸುತ್ತಾ, ಡಿಸೆಂಬರ್ 2012 ರ ಅಂತ್ಯದೊಳಗಾಗಿ ಒಓಎಸ್‌ಸಿಗೆ ಸಂಬಂಧಿಸಿದಂತೆ ನಿಖರ ಮಾಹಿತಿ ಹಾಗೂ, ಒಓಎಸ್‌ಸಿ ಅಡಿಯಲ್ಲಿ ಗುರುತಿಸಲಾದ ಎಲ್ಲಾ ಮಕ್ಕಳನ್ನೂ ವಿವಿಧ ಕಾರ್ಯತಂತ್ರದಡಿಯಲ್ಲಿ ದಾಖಲು ಮಾಡಿದಲ್ಲಿ ಅಂತಹ ಜಿಲ್ಲೆಯ ಹೆಸರನ್ನು ಬಹುಮಾನ ನೀಡಲು ಮಾನ್ಯ ಆಯುಕ್ತರ ಕಛೇರಿಗೆ ಶಿಫಾರಸ್ಸು ಮಾಡಲಾಗುವುದು. ಆದ್ದರಿಂದ ಎಲ್ಲಾ ಜಿಲ್ಲೆಯವರು ಈ ಸಂಬಂಧ ವಿಶೇಷ ಶ್ರಮ ವಹಿಸುವಂತೆ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಇವರಿಗೆ ತಿಳಿಸಿದರು.

ಸಿಡಬ್ಲ್ಯೂಎಸ್‌ಎನ್ ಕಾರ್ಯಕ್ರಮದಡಿಯಲ್ಲಿ ನಡೆಸಲಾಗುತ್ತಿರುವ ಎಸ್‌ಆರ್‌ಪಿ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ ಮಕ್ಕಳನ್ನು ಕೇಂದ್ರಕ್ಕೆ ಹೇಗೆ ಕರೆದುಕೊಂಡು ಬರಬೇಕೆಂಬ ಕುರಿತು ಎಸ್‌ಎಸ್‌ಎನಿಂದ ನೀಡಲಾಗಿರುವ ಸುತ್ತೋಲೆಯನ್ನು ಸಹ ನೀಡಿಲ್ಲದ ಪ್ರಕರಣಗಳು ಸಹ ಜಿಲ್ಲೆಗಳಲ್ಲಿ ಕಂಡು ಬಂದಿದ್ದು, ಜಿಲ್ಲೆಗಳವರು ಕೂಡಲೇ ಈ ಕುರಿತು ಕ್ರಮ ವಹಿಸುವಂತೆ ಕಿರಿಯ ಕಾರ್ಯಕ್ರಮಾಧಿಕಾರಿ, ಸಿಡಬ್ಲ್ಯೂಎಸ್‌ಎನ್ ಶಾಖೆ ಇವರು ಸಭೆಯಲ್ಲಿ ತಿಳಿಸಿದರು. ಅಲ್ಲದೆ ಹೆಚ್‌ಬಿಇ ಮಕ್ಕಳ ಮಾಹಿತಿಯನ್ನು ಮೂರು ವಿಧಧ ಫೋಟೋದೊಂದಿಗೆ ಕಳುಹಿಸಿಕೊಡಲು ಸುತ್ತೋಲೆಯನ್ನು ಈ ದಿನ ಇ-ಮೇಲ್‌ನಲ್ಲಿ ಕಳುಹಿಸಿಕೊಡಲಾಗುತ್ತಿದ್ದು, ಅದರಂತೆ ಜಿಲ್ಲೆಗಳವರು ಸೂಕ್ತ ಕ್ರಮ ವಹಿಸಬೇಕೆಂಬ ಮಾತನ್ನು ಸಹ ಹೇಳಿದರು. ಮುಂದುವರಿಯುತ್ತಾ, ಬೀದರ್ ಜಿಲ್ಲೆಯಲ್ಲಿ ಎಸ್‌ಆರ್‌ಪಿ ಕೇಂದ್ರಗಳು ಶೇ 100 ರಷ್ಟು ನಡೆಯುತ್ತಿದೆ ಎಂಬ ಅಂಶವನ್ನು ಜಿಲ್ಲೆಯವರು ವರದಿಸಿದ್ದು, ಪರಿಶೀಲಿಸಲಾಗಿ, ಈ ಮಾಹಿತಿ ವಾಸ್ತವಕ್ಕೆ ದೂರ ಎಂದು ತಿಳಿದು ಬಂದಿದ್ದಾಗಿ ಚರ್ಚೆಯಾದ ಮೇರೆಗೆ, ಮಾನ್ಯ ಆಯುಕ್ತರು, ಸಾ.ಶಿ.ಇ ಇವರು ಪ್ರತಿಕ್ರಿಯಿಸುತ್ತಾ, ಒಓಎಸ್‌ಸಿ/ ಸಿಡಬ್ಲ್ಯೂಎಸ್‌ಎನ್ ಮಕ್ಕಳಿಗೆ ವಿಶೇಷ ಆಸ್ಥೆ ವಹಿಸಬೇಕಾಗಿದ್ದು, ಈ ರೀತಿ ನಿರ್ಲಕ್ಷಕ್ಕೆ ಒಳಗಾಗಿರುವ ಬಗ್ಗೆ ತೀವ್ರ ವಿಷಾದ ವ್ಯಕ್ತಪಡಿಸುತ್ತಾ, ವಿಶೇಷ ಬಿ.ಇಡಿ ಮಾಡಿದಂತಹ ಸಾಕಷ್ಟು ಅಭ್ಯರ್ಥಿಗಳು ಎಲ್ಲಾ ಕಡೆಯಲ್ಲಿಯೂ ಲಭ್ಯವಿದ್ದು, ಅಗತ್ಯವಿದ್ದಲ್ಲಿ ಅಂತಹವರನ್ನೂ ಸಹ ಬಳಕೆ ಮಾಡಿಕೊಳ್ಳುವಂತೆ ಸಹ ಸಲಹೆ ನೀಡಿದರು. ಅಲ್ಲದೆ ಕೊಡಗು, ಚಿಕ್ಕಮಗಳೂರು, ಮೈಸೂರು, ಶಿರಸಿ ಜಿಲ್ಲೆಯವರು ಅಲಿಂಕೋ ಸಂಸ್ಥೆಯವರು ಸರಬರಾಜು ಮಾಡಿದ ಸಾಧನ ಸಲಕರಣೆಗಳ ಕುರಿತು ಸರಿಯಾದ ಮಾಹಿತಿ ನೀಡಿಲ್ಲದಿರುವುದರ ಬಗ್ಗೆ ಸಂಬಂಧಿಸಿದ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಇವರ ಗಮನ ಸೆಳೆಯುತ್ತಾ, ನಿಖರ ಮಾಹಿತಿ ನೀಡಲು ಸಹ ತಿಳಿಸಲಾಯಿತು.

ಕೆಜಿಬಿವಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಿಯೋಜಿತ ಮುಖ್ಯ ಶಿಕ್ಷಕರು ತಮಗೆ ಸದರಿ ಕೇಂದ್ರದಲ್ಲಿ ಕಾರ್ಯ ನಿರ್ವಹಿಸಲು ಆಸಕ್ತಿ ಇರುವುದಿಲ್ಲ ಎಂಬ ಅಂಶವನ್ನು ತಮ್ಮ ಗಮನಕ್ಕೆ ತಂದಿದ್ದು, ಆಸಕ್ತಿ ಹೊಂದಿಲ್ಲದವರನ್ನು ನಿಯೋಜಿಸಿದಲ್ಲಿ ಗುಣಮಟ್ಟದ ಕಾರ್ಯ ನಿರೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ರಾಜ್ಯ ಎಲ್ಲಾ ಜಿಲ್ಲೆಗಳಲ್ಲಿ ಇರುವ ಕೆಜಿಬಿವಿಯಲ್ಲಿ ಎಷ್ಟು ಮಂದಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ, ಇವರಲ್ಲಿ ಸದರಿ ಹುದ್ದೆಯಲ್ಲಿ ಮುಂದುವರಿಯಲು ಆಸಕ್ತಿ ಹೊಂದಿರುವ ಹಾಗೂ ಆಸಕ್ತಿ ಹೊಂದಿಲ್ಲದ ಮುಖ್ಯ ಶಿಕ್ಷಕರ ಮಾಹಿತಿಯನ್ನು

ಹಾಗೂ ಇನ್ನಿತರೆ ಶಿಕ್ಷಕರು ಅಲ್ಲಿ ಕಾರ್ಯ ನಿರ್ವಹಿಸಲು ಇಚ್ಛಿಸಿದಲ್ಲಿ ಅವರ ಮಾಹಿತಿಯನ್ನೂ ಸಹ ಪಡೆದು ರಾಜ್ಯ ಕಛೇರಿಗೆ ಸಲ್ಲಿಸುವಂತೆ ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಶಿಅ ಇವರು ಆದೇಶಿಸಿದರು.

ಕೋಲಾರ ಕೆಜಿಬಿವಿ ಕೇಂದ್ರದಲ್ಲಿ ನೀರಿನ ಕೊರತೆ ಇದ್ದು, ಈ ಸಂಬಂಧ ಕೂಡಲೇ ಸದರಿ ಜಿಲ್ಲೆಯ ಜಿಲ್ಲಾಧಿಕಾರಿಗಳವನ್ನು ಭೇಟಿ ಮಾಡಿ ಅನುಕೂಲ ಕಲ್ಪಿಸಿಕೊಡಲು ಕೋರುವಂತೆ ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಶಿಅ ಇವರು ಉಪನಿರ್ದೇಶಕರು (ಆ) ಇವರಿಗೆ ಸಲಹೆ ನೀಡಿದರು. ಮುಂದುವರಿಸುತ್ತಾ, ಮುದ್ದೆಬಿಹಾಳ, ಬಿಜಾಪುರ ತಾಲ್ಲೂಕಿನ ಕೆಜಿಬಿವಿ ಕಟ್ಟಡ ಇನ್ನೂ ಸಂಪೂರ್ಣವಾಗಿಲ್ಲದ ಬಗ್ಗೆ ಪ್ರಸ್ತಾಪಿಸಿ ಮುಂದಿನ ಸಾಲಿನಿಂದ ಈ ಕಟ್ಟಡಕ್ಕೆ ಬಾಡಿಗೆ ಸಹ ದೊರೆಯುವುದಿಲ್ಲವಾದ ಪ್ರಯುಕ್ತ, ಸಂಬಂಧಿಸಿದ ಅಧಿಕಾರಿಗಳು ವೈಯುಕ್ತಿಕ ಗಮನ ಹರಿಸಿ ತುರ್ತಾಗಿ ಕಟ್ಟಡ ಕಾಮಗಾರಿ ಕಾರ್ಯ ಕೈಗೊಳ್ಳುವಂತೆ ಇಲ್ಲದಿದ್ದಲ್ಲಿ ಸಂಬಂಧಪಟ್ಟವರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ನಿರ್ದೇಶನ ನೀಡಿದರು. ಅಲ್ಲದೆ ರಾಯಚೂರಿನ ಶಹಪುರ, ಸುರಪುರ, ಯಾದಗಿರಿ ಇಲ್ಲಿಯೂ ಸಹ ಇದೇ ಪರಿಸ್ಥಿತಿ ಮುಂದುವರಿದಿದ್ದು, ಇದೇ ಸೂಚನೆಯನ್ನು ರಾಜ್ಯ ಯೋಜನಾ ನಿರ್ದೇಶಕರು, ಸಶಿಅ ಇವರು ಸೂಚಿಸಿದರು.

ರಾಜ್ಯದ ವಿವಿಧ ಜಿಲ್ಲೆಯ 570 ಶಾಲೆಗಳಿಗೆ ಗಣಕಯಂತ್ರಗಳನ್ನು ಸರಬರಾಜು ಮಾಡಲು ಕ್ರಮ ಆಗುತ್ತಿದ್ದು, ಈಗಾಗಲೇ ಸುತ್ತೋಲೆ ನೀಡಿರುವಂತೆ ಸಂಬಂಧಿಸಿದ ಶಾಲೆಗಳವರು ತುರ್ತಾಗಿ ಸೈಟ್ ಪ್ರಿಪರೇಷನ್ ಕಾರ್ಯ ಮುಗಿಸಲು ಸೂಚಿಸಲಾಯಿತು.

ಸಮವಸ್ತ್ರ ಸರಬರಾಜಿಗೆ ಸಂಬಂಧಿಸಿದಂತೆ ತಾಲ್ಲೂಕಿನ ಅಧಿಕಾರಿಗಳ ಜೊತೆ ಚರ್ಚಿಸಿ, ಸಮವಸ್ತ್ರದ ಬಣ್ಣ ಹಾಗೂ ಮಕ್ಕಳ ಸಂಖ್ಯೆಯನ್ನು ಶಾಲಾವಾರು ರಾಜ್ಯ ಕಛೇರಿಗೆ ನೀಡಿದಲ್ಲಿ ರಾಜ್ಯ ಕಛೇರಿ ವತಿಯಿಂದ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂಬ ಮಾತನ್ನು ನಿರ್ದೇಶಕರು (ಕಾ), ಸಶಿಅ ಇವರು ಸಭೆಯಲ್ಲಿದ್ದ ಅಧಿಕಾರಿಗಳವರ ಗಮನಕ್ಕೆ ತಂದರು.

ಮಾನ್ಯ ಶಿಕ್ಷಣ ಸಚಿವರು ತಿಳಿಸಿರುವಂತೆ ನೂರು ವರ್ಷ ಪೂರೈಸಿದ ಸರ್ಕಾರಿ ಶಾಲೆಗಳ ಹಾಗೂ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿ ಉನ್ನತ ಮಟ್ಟಕ್ಕೆ ತಲುಪಿದ ವಿದ್ಯಾರ್ಥಿಗಳ ಸಂಪೂರ್ಣ ಮಾಹಿತಿಯನ್ನು ಕ್ರೂಢೀಕರಿಸಿ ದಾಖಲೀಕರಣ ಮಾಡುವ ಉದ್ದೇಶ ಹೊಂದಿದ್ದು, ಈಗಾಗಲೇ ಸಾಕಷ್ಟು ಬಾರಿ ಈ ಮಾಹಿತಿಯನ್ನು ಜಿಲ್ಲೆಯವರಿಗೆ ನೀಡಲಾಗಿದ್ದು, ಈ ಸಂಬಂಧ ಸಂಬಂಧಿಸಿದ ಜಿಲ್ಲೆಯ ಅಧಿಕಾರಿಗಳು ವೈಯುಕ್ತಿಕ ಗಮನಹರಿಸಿ ಮಾಹಿತಿ ಸಂಗ್ರಹಿಸಿ ರಾಜ್ಯ ಕಛೇರಿಗೆ ಕಳುಹಿಸಿಕೊಡಲು ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಶಿಅ ಇವರು ಸೂಚಿಸಿದರು.

## RMSA

10 ನೇ ತರಗತಿಯ ಮಕ್ಕಳಿಗೆ ಸ್ಥಳೀಯ ಪ್ರವಾಸ ಕೈಗೊಳ್ಳುವ ಸಂಬಂಧ ಸುತ್ತೋಲೆಯನ್ನು ನೀಡಲಾಗಿದ್ದು, ಅದರಂತೆ ಕ್ರಮ ವಹಿಸಲು ನಿರ್ದೇಶಕರು (ಆರ್‌ಎಂಎಸ್‌ಎ) ಇವರು ತಿಳಿಸಿದರು. ಮುಂದುವರಿಯುತ್ತಾ, ಚಿಣ್ಣರ ಜಿಲ್ಲಾ ದರ್ಶನ ಕಾರ್ಯಕ್ರಮಕ್ಕೆ ಉತ್ತಮ ಗುಣಮಟ್ಟದ ಸಾರಿಗೆ, ಊಟದ ವ್ಯವಸ್ಥೆಯನ್ನು ನೀಡುವತ್ತ ಎಲ್ಲಾ ಜಿಲ್ಲೆಯ ಸಂಬಂಧಿಸಿದ ಅಧಿಕಾರಿಗಳು ಗಮನಹರಿಸಲು ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸಲಹೆ ನೀಡಿದರು.

ಸಾದಿಲ್ವಾರು ಅನುದಾನಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡುವಂತೆ ದಿನಾಂಕ: 25.01.2012 ಸುತ್ತೋಲೆಯನ್ನು ನೀಡಲಾಗಿದ್ದು, ಇದುವರೆಗೆ ಜಿಲ್ಲೆಗಳಲ್ಲಿ ಈ ಸಂಬಂಧ ಯಾವುದೇ ಕ್ರಮ ಆಗಿಲ್ಲದ ಬಗ್ಗೆ ನಿರ್ದೇಶಕರು, ಆರ್‌ಎಂಎಸ್‌ಎ ಇವರು ಪ್ರಸ್ತಾಪಿಸುತ್ತಾ, ಕೂಡಲೇ ಕ್ರಮ ವಹಿಸಲು ಸೂಚಿಸಿದರು. ಅಲ್ಲದೆ ಹೆಣ್ಣು ಮಕ್ಕಳ ವಸತಿ ಗೃಹಕ್ಕೆ ಸಂಬಂಧಿಸಿದಂತೆ ಪ್ರತಿ ಮೂರು ತಿಂಗಳಿಗೊಮ್ಮೆ ಮಾಹಿತಿ ನೀಡುವಂತೆ ಸೂಚಿಸಲಾಗಿದ್ದರೂ

ಸಹ ಇನ್ನು 45 ವಸತಿ ಶಾಲೆಗಳಿಂದ ಮಾಹಿತಿ ರಾಜ್ಯ ಕಛೇರಿಗೆ ತಲುಪಿರುವುದಿಲ್ಲ, ಕೂಡಲೇ ತಲುಪಿಸಲು ಕ್ರಮ ವಹಿಸುವಂತೆ ಸಹ ತಿಳಿಸಿದರು.

ಕೆಲವು ಆದರ್ಶ. ವಿದ್ಯಾಲಯ ನಡೆಸುತ್ತಿರುವ ಕೇಂದ್ರಕ್ಕೆ ಕನಿಷ್ಟ 2 ರಿಂದ 3 ಸಾವಿರ ಬಾಡಿಗೆ ನೀಡಲು ಅರ್ಹವಲ್ಲದ ಕಟ್ಟಡಗಳಿಗೆ ರೂ 10,000 ಬಾಡಿಗೆ ನಿಗಧಿಪಡಿಸಿ, ಪಾವತಿಸುತ್ತಿರುವ ನಿದರ್ಶನಗಳು ತಮ್ಮ ಗಮನಕ್ಕೆ ಬಂದಿದ್ದು, ಸಂಬಂಧಪಟ್ಟ ಮೇಲಧಿಕಾರಿಗಳು ಸದರಿ ಸ್ಥಳಗಳಿಗೆ ಭೇಟಿ ನೀಡಿ ಕಡ್ಡಾಯವಾಗಿ ಪರಿಶೀಲಿಸಿ ವರದಿ ಮಾಡುವಂತೆ ಸಹ ಸೂಚಿಸಿದರು.

ಕರ್ನಾಟಕ ಜ್ಞಾನ ಆಯೋಗದ ವತಿಯಿಂದ ಅರಿವು ಕಾರ್ಯಕ್ರಮದ ಮೂಲಕ ಕೆಲವು ಪ್ರೌಢ ಶಾಲೆಗಳಲ್ಲಿ **"ಮುಕ್ತ ಗ್ರಂಥಾಲಯ"** ವನ್ನು ಆಯೋಜಿಸಲಾಗುತ್ತಿದ್ದು, ಆಯಾ ಜಿಲ್ಲೆಯ ಡಯಟ್‌ನ ಒಬ್ಬ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದ್ದು, ಸದರಿ ನೋಡಲ್ ಅಧಿಕಾರಿಯವರು ಕನಿಷ್ಟ ತಿಂಗಳಿಗೆ ಒಮ್ಮೆ ಸದರಿ ಶಾಲೆಗೆ ಭೇಟಿ ನೀಡಿ ಈ ಗ್ರಂಥಾಲಯ ಹೇಗೆ ಕಾರ್ಯ ನಿರ್ವಹಿಸುತ್ತಿದೆ ಎಂಬ ಬಗ್ಗೆ ಪರಿಶೀಲಿಸಿ ಮಾಡಬೇಕಾಗಿದ್ದು, ಇದರ ಮೇಲ್ವಿಚಾರಣೆಯನ್ನು ಉಪನಿರ್ದೇಶಕರು (ಆ), ಸಾ.ಶಿ.ಇ ಇವರು ನಿರ್ವಹಿಸಬೇಕೆಂಬ ಮಾತನ್ನು ನಿರ್ದೇಶಕರು (ಆರ್‌ಎಂಎಸ್‌ಎ), ಇವರು ಸಭೆಯಲ್ಲಿ ತಿಳಿಸಿದರು.

ರಾಜ್ಯ ಯೋಜನಾ ನಿರ್ದೇಶಕರು
ಎಸ್‌ಎಸ್‌ಎ/ಆರ್‌ಎಂಎಸ್‌ಎ